ಹರಾಮುಕೆಗಾಗಿ

ಹಣ್ಣುಕಾಯಿ

ಕಡೆಂಗೋಡ್ಲು ಶಂಕರ ಭಟ್ಟ.

MANGALORE
Printed at the Codialbail Press
1933

ವಿಷಯಾನುಕ್ರಮಣಿಕೆ

ಮುನ್ನುಡಿ

ಗ್ರಂಥವೊಂದು ಚಿಕ್ಕದಾಗಿರಲಿ, ದೊಡ್ಡದಾಗಿರಲಿ—ಅದಕ್ಕೊಂದು ಮುನ್ನುಡಿ ಬೇಕೆಂಬುದು ನಮ್ಮ ಕಟ್ಟಳೆಯಾಗಿದೆ. ಮುನ್ನುಡಿ ಬಲ್ಲಿದರ ಲೆಕ್ಕಣಿಕೆಯ ಮೊನೆಯಿಂದ ಹೊರಟುದಾದರೆ ಮತ್ತಷ್ಟು ಲೇಸು. ಬ್ರಹ್ಮಚಾರಿಯಾದವನು ತನ್ನ ಸ್ನಾತಕವ್ರತಕ್ಕೆ ನಮಸ್ಕಾರ ಹೊಡೆದು ಸಮಾವರ್ತನ ವಿಧಿಯ ವಿವಾಹಮಂಗಲ ಸ್ನಾನವನ್ನು ಮುಗಿಸಿದ ಮೇಲೆ ಆವನಿಗೆ ವಿವಾಹ ಮಂಡಪದ ಮೇಲ್ವಾಸಿನ ಮಣೆ ಕಾದಿಡಲ್ಪಡುವುದಷ್ಟೆ? ಮತ್ತೆ ಪಾಣಿಗ್ರಹಣಕ್ಕೆ ಕೈ ನೀಡಿದರಾಯಿತು. ಬಲ್ಲಿದರ ಮುನ್ನುಡಿಯೆಂದರೆ ಇಂತಹ ಮಂಗಲಸ್ನಾನವೇ ಸರಿ. ಇದಾದ ಮೇಲೆ ಕೀರ್ತಿವನಿತೆಯ ಪಾಣಿಗ್ರಹಣವೆಂಬುದು ಅವಶ್ಯಂಭಾವಿಯಾದ ಪ್ರಸಂಗ. ದೊಡ್ಡವರ ಮುನ್ನುಡಿಯು ಗ್ರಂಥವನ್ನು ಅಲಂಕರಿಸಬಾರದೆಂದು ಯಾರ ಮನಸ್ಸಿನಲ್ಲಿದ್ದೀತು? ಅದರಲ್ಲಿಯೂ ಲೇಖಕನು ತರುಣನಾಗಿ 'ಕೀರ್ತಿಂವರ'ನಾಗಿದ್ದರೆ? ಹೌದು; ಕೀರ್ತಿ ಬೇಡವೆಂಬ ವೈರಾಗ್ಯ ಬುದ್ಧಿ ಇರುವವರು ಕಡಿಮೆ. ಆದರೂ ನಾನಿದುವರೆಗೆ 'ಮುನ್ನುಡಿ'ಯ ಪ್ರಶಸ್ತಿಯನ್ನು ಅರಿತುಕೊಂಡವನಲ್ಲ. ನಾನು ಬರೆದು ಪ್ರಕಟಿಸಿದ ಪುಸ್ತಕಗಳು ಹಿನ್ನುಡಿಮುನ್ನುಡಿಯಿಲ್ಲದೆ ಹೊರಬಿದ್ದಿವೆ. "ಮುನ್ನುಡಿ ಯಿಲ್ಲದ ಗ್ರಂಥ ಮುಂಡಾಸಿಲ್ಲದ ಬಿಟ್ಟಮಂಡೆಯಂತೆ; ವಿಭೂತಿ ನಾಮ ಮುದ್ರೆಗಳಿಲ್ಲದ ಬರಿಹಣೆಯಂತೆ" ಎಂದು ನಮ್ಮ ಸ್ನೇಹಿತರು ಹೇಳುತ್ತಲೆ ಇದ್ದರು; ಈಗಲೂ ಹೇಳುತ್ತಾರೆ. 'ಪೂರ್ವ ಸಂಪ್ರದಾಯ' ಎನ್ನುವುದನ್ನೆಲ್ಲ ಮುರಿದು, ಮಣ್ಣುಮುಕ್ಕಿಸುವ ಈ ಯುಗ ದಲ್ಲಿ ಇದೊಂದು ಪದ್ಧತಿಯನ್ನು ಪಾಲಿಸಬೇಕೆ? ದೊಡ್ಡವರ ಪೀಯೂಷ ಮಧುರ ಪ್ರಶಂಸಾವಾಕ್ಯಗಳನ್ನು ಒಳಕೊಂಡ ಮುನ್ನುಡಿಯನ್ನು ಓದುತ್ತ ಓದುತ್ತ, ಕೆನ್ನೆಯನ್ನು ಕೆಂಪೇರಿಸುತ್ತ ಏರಿಸುತ್ತ, ನಾಚುತ್ತ ವಾಚಕರ ಮುಂದೆ ನಿಲ್ಲುವುದಕ್ಕಿಂತ ಹೀಗೆಯೆ ನಿಲ್ಲುವುದು ಉತ್ತಮವೆಂಬ ಅಭಿಪ್ರಾಯ ನನ್ನಲ್ಲಿತ್ತು; ಈಗಲೂ ಇದೆ.

ಆದರೂ 'ಹಣ್ಣುಕಾಯಿ'ಗೆ ಪ್ರಸ್ತಾವನೆಯೊಂದು ಬೇಕಾಯಿತು. ಮಹನೀಯ ರಿಂದ ಬರೆಯಿಸಿಕೊಳ್ಳುವುದಕ್ಕಿಂತ ನಾನೇ ಬರೆವುದು ಲೇಸೆಂದು ಕಂಡುಬಂತು. ಈ ಚಿಕ್ಕ ಪುಸ್ತಕದಲ್ಲಿರುವುವು—ಇಂದಿನ ಹಣ್ಣುಕಾಯಿಗಳಲ್ಲ; ಹಿಂದಿನವು. ಹೀಗೆಂದು ಹೇಳಿ ಇಂದಿನ ನಾನು ಹಿಂದಿನವನಿಗಿಂತ ಎಷ್ಟೋ ಸುಧಾರಿಸಿ ಕೊಂಡಿದ್ದೇ ನೆಂದು ತೋರಿಸಿಕೊಳ್ಳಬೇಡವೆ? ಇದನ್ನು ನಾನೇ ಹೇಳದಿದ್ದರೆ ಮತ್ತಾರು ಹೇಳ ಬೇಕು? ನಾಲ್ಕಾರು ವರ್ಷಗಳ ಹಿಂದೆಯೆ ಈ ಸಂಗ್ರಹದ ಹಣ್ಣುಕಾಯಿಗಳು

ಮೂಡಲು ಪ್ರಾರಂಭಿಸಿದ್ದುವು. ಕೆಲವು ಚಿಗುರುಗಳಾಗಿದ್ದಾಗಲೆ ಬಾಡಿ ಬಿದ್ದುವು. ಹೂವಾಗಿ ಉದುರಿದುವು ಇನ್ನೂ ಹಲವು. ಮಿಡಿ, ಕಾಯಿ, ದೋರೆ ಎಂದು ಬೆಳೆದು ಬಂದುವು ಕಡಿಮೆ. ಒಣಗದೆ ಹಣ್ಣಾಗಿ ಬಾಳಿದುವು ಇನ್ನೂ ಕಡಿಮೆಯೆನ್ನ ಬೇಕು. ಅಂತೂ ಇಂದಿನ ದಿನಕ್ಕೆ ಆಯಲು ಸಿಕ್ಕಿದುವು ಇಷ್ಟೇ! ಮೂರು ವರ್ಷಗಳ ಈಚಿನ ಕಾಯಾಗಲಿ, ಹಣ್ಣಾಗಲಿ ಇದರಲ್ಲಿಲ್ಲ. ಹಳೆಯ ಕಾಯಿ; ಹಳೆಯ ಹಣ್ಣು; ಕೊಳೆತು ಹೋಗಿರಬಹುದೆಂದು ಭಾವಿಸುವ ಅಧಿಕಾರ ವಾಚಕರಿಗೂ ಇದೆ; ನನಗೂ ಇದೆ! ಆದರೆ ನಾನೇ ಬಿತ್ತಿದ ಬೀಜ; ನಾನೇ ಬೆಳೆಯಿಸಿ ಕಶಿಮಾಡಿದ ಗಿಡ; ಅದರಲ್ಲಿ ಆದ ಫಲಪುಷ್ಪಗಳು ಎಷ್ಟು ಹಳೆಯವಾಗಿದ್ದರೂ ಒಂದು ಕಾಲದಲ್ಲಿ ಅವು ಆನಂದದಾಯಕವಾಗಿದ್ದುವಲ್ಲವೆ? ನನ್ನ ಬಾಲಿಶ ಪ್ರಯತ್ನಫಲವಾದ ಈ ಗ್ರಂಥ ವನ್ನು ವಾಚಕರ ಮುಂದಿಡುವಾಗ, ಪೂರ್ವಾನುಭೂತ ಸಂತೋಷದ ಸ್ಮರಣೆ ಆಗದೆ ಇರುವುದೇ?

ದಿನದಿನವೂ ಹೊಸಬರಾಗುತ್ತೇವೆ—ಎಂದು ಹೇಳಿಕೊಳ್ಳಲು ಅನೇಕರಿಗೆ ಆನಂದವಾಗುತ್ತದೆ. ಈ ಹೊಸತನವೆಂಬುದು ಕೆಲವು ವೇಳೆ ಕೇವಲ ಪರಿವರ್ತನ ವಾಗಿರಬಹುದು; ವ್ಯತ್ಯಾಸವಾಗಿರಬಹುದು. ಆದರೂ ಇಂದಿನದು ಹಿಂದಿನದಲ್ಲ ಎನ್ನುವಾಗ ಹೃದಯಕ್ಕಾಗುವ ಸಂತುಷ್ಟಿಯ ಪರಿಯೇ ಬೇರೆ. ಈ ಲಕ್ಷಣಕ್ಕೆ ಸಮನ್ವಯಹೊಂದುವವರಲ್ಲಿ ನಾನೂ ಒಬ್ಬ. ಮುಪ್ಪಿನ ಮುದುಕನು ತನ್ನ ಬಾಲ್ಯದ ಭಾವಚಿತ್ರವನ್ನು ನೋಡಿ ಹಿಗ್ಗುವುದರಲ್ಲಿ ಅನ್ಯಾಯವುಂಟೆ? ಮುಪ್ಪಿಗೆ ಬಿಳಿ ಮೀಸೆಯೇ ಅಲಂಕಾರವಾಗಿ ಕಾಣಬಹುದು; ಆದರೂ ಮೀಸೆಯಿಲ್ಲದ ಹಿಂದಿನ ಅಪ್ರೌಢವಾದ ನುಣ್ಮೊಗವು ಆತನಿಗೆ ಜುಗುಪ್ಸಾಜನಕವಾದೀತೆ? ಸರ್ವಥಾ ಇಲ್ಲ. ಅಂದು ಹೀಗೆ ಹೀಗೆ ಇದ್ದೆನೆಂಬುದನ್ನು ಹೇಳುವುದಕ್ಕೂ ತೋರಿಸುವುದಕ್ಕೂ ಅದೊಂದು ಉತ್ಸಾಹವಲ್ಲದೆ ವ್ಯಸನವಿಲ್ಲ. ಹಿಂದಿನ ನನ್ನ ಕವಿತೆಗಳನ್ನು ಇಂದು ಹೊರಗೆಡಹು ವಾಗ ಇದೇ ಭಾವವು ನನ್ನಲ್ಲಿದೆ. ಈ ಪದ್ಯ ಸಂಗ್ರಹದಲ್ಲಿ ಹೆಚ್ಚಿನವು ದೂರದ ಭೂತಕಾಲಕ್ಕೆ ಸೇರಿದುವಾದುದರಿಂದ, ಇಂದಿನವಕ್ಕೂ ಅವಕ್ಕೂ ಹೋಲಿಕೆ ಇಲ್ಲದಿರಲೂ ಬಹುದು. ನಾನಾದರೂ, ಬಹಳ ಪರಿವರ್ತನ ಬೇಕಾದುವುಗಳನ್ನು ತಿದ್ದಿ ತುರುಕಿಸಲು ಪ್ರಯತ್ನಿಸಿಲ್ಲ; ಅವುಗಳನ್ನು ಬಿಟ್ಟೇ ಬಿಟ್ಟಿದ್ದೇನೆ. ಅಲ್ಲಿ, ಇಲ್ಲಿ, ಅಲ್ಪ ಸ್ವಲ್ಪ ತಿದ್ದಿ ಶುಚಿಮಾಡಬಹುದಾದುವುಗಳನ್ನು ಮಾತ್ರ ಇರಿಸಿದ್ದೇನೆ. ಸಾಧ್ಯವಾದ ಮಟ್ಟಿಗೆ ಅಕ್ಷತವಾಗಿ ಅಂದಿನವುಗಳನ್ನು ಅಂದಿನ ರೂಪದಲ್ಲಿಯೇ ಇಡಲು ಪ್ರಯತ್ನಿಸಿ ದ್ದೇನೆ. ಇದನ್ನು ವಾಚಕರು ಮರೆಯಬಾರದು.

ಈ ಪುಸ್ತಕದಲ್ಲಿ ಒಬ್ಬ ಪಂಡಿತನು ಪಯಣಮಾಡಿ ಅನೇಕರ ಮನಸ್ಸನ್ನು ನೋಯಿಸಿದ್ದಾನೆಂದು ನನಗೆ ತಿಳಿದು ಬಂದಿದೆ. 'ಪಂಡಿತನ ಪಯಣ'ವು ಕೆಲವು ಸಮಯದ ವರೆಗೆ ರಹಸ್ಯವಾಗಿಯೇ ಇತ್ತು. ಪ್ರಯಾಣ ವರ್ಣನೆಯನ್ನು ಯಾವ ಪತ್ರಿಕೆಯೂ ಪ್ರಕಟಮಾಡಿರಲಿಲ್ಲ. ಕಳೆದ ವರ್ಷ, ಸ್ಥಳೀಯ ಮಿತ್ರಮಂಡಲಿಯಲ್ಲಿ, ಶ್ರೀ. ಪಂ. ಮಂಗೇಶರಾಯರ ಅಧ್ಯಕ್ಷತೆಯಲ್ಲಿ, ಪಂಡಿತನ ಪಯಣದ ಚರಿತ್ರೆಯನ್ನು ಮೊದಲನೆಯ ಬಾರಿ ಓದಿದೆನು; ಓದಿ ಅನೇಕರ ವಿರೋಧವನ್ನು ಕಟ್ಟಿಕೊಂಡೆನು; ಅನೇಕರ ಮನಃ ಪ್ರಸೂನವನ್ನು ಕೊರಗಿಸಿದೆನು. ಇದೊಂದು ಕೊಂಕು ಹಾಡು ಅಥವಾ ವಕ್ರಗೀತ (Satire); ಇಂತಹ ಪದ್ಯಗಳಲ್ಲಿ ಆಂಗ್ಲಕವಿಗಳಾದ ಡ್ರೈಡನ್, ಪೋಪ್ ಮೊದಲಾದವರು ಬಹಳ ವ್ಯವಸಾಯ ಮಾಡಿದ್ದರು. ನಮ್ಮ ಕನ್ನಡದ ಪ್ರಾಚೀನ ಕಾವ್ಯಗಳ ಏಕದೇಶಗಳಲ್ಲಿ ಇಂತಹ ಪದ್ಯಗಳು ದೊರೆತಾವು. ಆದರೆ ಪ್ರಾಚೀನ ಮಹಾಕಾವ್ಯಗಳ ಪುನೀತರಸಸಮುದ್ರದಲ್ಲಿ, ಇವು ಬಿಂದು ರೂಪದಲ್ಲಿ ಬೆರೆತಿರುವುದರಿಂದ, ಇವುಗಳ ಪ್ರತ್ಯೇಕವಾದ ಆಸ್ತಿತ್ವವು ನಮ್ಮ ಗೋಚರಕ್ಕೆ ಬರುವಂತಿಲ್ಲ. ಆದುದರಿಂದ ಆಮೂಲಾಗ್ರವಾಗಿ ವಕ್ರಾರ್ಥವುಳ್ಳ ಇಂಥ ಹಾಡುಗಳನ್ನು ಏಕಾಂಗವಾಗಿ ಎತ್ತಿ ತೋರಿಸಿದರೆ "ಅಯ್ಯೋ! ಇದು ಹೊಸ ಪದ್ಧತಿ! ಅಬ್ರಹ್ಮಣ್ಯಂ" ಎಂದು ಉದ್ಗಾರವೆತ್ತಬೇಕೆಂದೇ ನಮಗೆ ತೋರೀತು. "ಸಂಪ್ರಾಪ್ತೇ ಸನ್ನಿಹಿತೇಕಾಲೇ। ನಹಿನಹಿ ರಕ್ಷತಿ ಡುಕೃಞ್ ಕರಣೇ" ಎಂದು ಶ್ರೀ ಶಂಕರಾಚಾರ್ಯರು, ವ್ಯಾಕರಣ ಪಂಡಿತರ ಕಿವಿಹಿಂಡಲು ಕೈನೀಡಿದರೆ, ಅವರು ಉಲ್ಲಾಸದಿಂದ ಕಿವಿಯನ್ನು ಒಡ್ಡಿಸುತ್ತಾರೆ. ಆದರೆ ಈ ದಿನದ ಯಾರಾದರೊಬ್ಬರು "ಸಂಧಿಸಮಾಸದ ಹೊರೆಗಳ ಹೊತ್ತು। ಬಂದುದೆ ನಿನಗೀ ವಿಧದ ವಿಪತ್ತು?" ಎಂದು ಪದಕಟ್ಟಿದರೆ, ರೋಷಾವೇಶ ಹೊಂದುವ ಸಂಭವವೆ ಹೆಚ್ಚು. ಇದ್ದು ಕೊಳ್ಳಲಿ; ಅಪರಿಚಿತವಸ್ತುವಿನಲ್ಲಿ ಮೊದಲು ದ್ವೇಷ, ಮತ್ತೆ ಅವಜ್ಞೆ, ಮತ್ತೆ ಅನಿವಾರ್ಯವೆಂಬ ಸಹನೆ, ಮತ್ತೆ ಆದರ; ಈ ಭಾವ ಪರಂಪರೆಯು ಸ್ವಾಭಾವಿಕವಾದುದು. ಈ ತೆರದ ವಕ್ರಗೀತವು ಪಂಡಿತರ ಕುರಿತಾಗಿ ಮಾತ್ರವಲ್ಲ; ಯಾರ ಕುರಿತಾಗಿಯೂ ಬರೆಯಲ್ಪಡಬಹುದು. ಅದೊಂದು ಪದ್ಯ ವಿಧಾನವೆಂದು ಬಗೆಯ ಬೇಕಲ್ಲದೆ, ಖೇದಕ್ಕೆ ಎಡೆಗೊಡಬಾರದೆಂದು ನನಗೆ ತೋರುತ್ತದೆ.

ಪ್ರಾಚೀನ ಪಾಂಡಿತ್ಯವನ್ನು ಹಳಿಯುವುದೇ ಪಂಡಿತನ ಪಯಣದ ಉದ್ದೇಶ ವಲ್ಲವೇ? ಎಂದೂ ಅಲ್ಲ; ಕರ್ಮರಹಿತ ಜ್ಞಾನವನ್ನು ಈ ಪದ್ಯದಲ್ಲಿ ಅವಹೇಳನ ಮಾಡಲಾಗಿದೆಯಷ್ಟೆ. ಪದ್ಯದ ಉದ್ದಗಲದ ಅರ್ಥವಿಷ್ಟೆ. ಅದರಲ್ಲಿಯೂ 'ಪಂಡಿತ' ಎಂಬ ಪದದ ವಾಚ್ಯಾರ್ಥ ಸೂಚಿತರಾದ ವಿದ್ವಾಂಸರನ್ನು, ಅವರು ಪ್ರಾಚೀನರಾಗಿರಲಿ, ನೂತನರಾಗಿರಲಿ, ಅಪಮಾನಿಸಲಿಲ್ಲ. ಅಲ್ಲದೆ, ಲೇಖಕನಾದರೂ ಪಂಡಿತ ಜಾತಿಗೆ

ಸೇರಿದ ಪ್ರಾಣಿಯಾಗಿರುವಾಗ? ಆದುದರಿಂದಲೆ, ನ್ಯಾಯವಾಗಿ ಇದನ್ನೋದಿ ಮರುಕ ಹೊಂದಲು ಅಧಿಕಾರವಿರುವುದಿಲ್ಲ; ಹಾಗೆ ಹೊಂದಿದರೆ ಅದು ವಾಚಕರ ತಪ್ಪಲ್ಲದೆ, ಬರೆದವನ ತಪ್ಪಲ್ಲ. ತಪ್ಪು ವಾಚಕರದಾದರೂ ಅದರಿಂದ ಬರೆದವನಿಗೆ ಅನ್ಯಾಯವಾದೀತು. ಅವರಿಗೂ ಅನ್ಯಾಯವಾದೀತು.

ಕೊನೆಯ ಭರತವಾಕ್ಯದಲ್ಲಿ ಈ ಗ್ರಂಥವನ್ನು ಮುದ್ರಿಸಲು ಕಾರಣವಾದವರಿಗೆ ಕೃತಜ್ಞತಾ ಸಮರ್ಪಣೆಯನ್ನು ಮಾಡಬೇಕಾಗಿದೆ. ಪ್ರಕಾಶಕರೆನಿಸುವವರಿಗೆ ಈಗಿನ ಕಾಲದಲ್ಲಿ ಅಸಿಧಾರಾವ್ರತವು ತಪ್ಪಿಲ್ಲ. ಗ್ರಂಥಪ್ರಕಾಶನವೇ ಹಾನಿಕರ ವ್ಯಾಪಾರ. ಅದರಲ್ಲಿಯೂ ಹೊಸ ಹಾಳು ಕಬ್ಬವನ್ನು ಪ್ರಕಟ ಪಡಿಸುವುದೆಂದರೆ, ಅನೇಕರ ಶಾಪ ನಿಂದೆಗಳ ಹೊರೆಯನ್ನು ಹೊತ್ತುಕೊಳ್ಳುವುದೆಂದು ಅರ್ಥ. ತಮಗೆ ದೊರೆವ ನಿಂದೆಯ ಒಂದಿಷ್ಟು ದಾಯಭಾಗವನ್ನು ಪ್ರಕಾಶಕರಿಗೆ ಕೊಟ್ಟರೆ, ಪ್ರಕಾಶಿತರ ಕೆಲಸ ತೀರಿತು. ಇಂಥ ಸಂದರ್ಭದಲ್ಲಿ ಪುಸ್ತಕ ಪ್ರಕಾಶನಕ್ಕೆ ವಾಙ್ಮಯದ ಅಚಲ ಪ್ರೀತಿ ಯೊಂದೇ ಚೋದಕವಲ್ಲದೆ ಬೇರೆ ಏನೂ ಅಲ್ಲ. ಗ್ರಂಥಕರ್ತರು ಒಂದೆರಡು ಸವಿ ನುಡಿಗಳಿಂದಲಾದರೂ, ಪ್ರಕಾಶಕರಿಗೆ ಕೃತಜ್ಞತೆಯನ್ನು ಸಮರ್ಪಿಸಬೇಡವೇ? ಬಾಲ ಸಾಹಿತ್ಯ ಮಂಡಲದವರು ನನ್ನ ಹೃತ್ಪೂರ್ವಕವಾದ ಅಭಿನಂದನಕ್ಕೆ ಸತ್ಪಾತ್ರವಾಗಿದ್ದಾರೆ. ಇವರಲ್ಲದೆ, ಹಣ್ಣುಕಾಯಿಯು ಇತರರ ದೃಷ್ಟಿಗೆ ಬೀಳುವ ಮೊದಲೆ, ಅದನ್ನು ಕೊಯ್ದು ಕನ್ನಡಿಗರ ಮುಂದಿಟ್ಟ ನನ್ನ ಬಂಧುಗಳೂ ನನ್ನ ಕನ್ನಡ ಸಾಹಿತ್ಯ ಗುರುಗಳೂ ಆದ ಶ್ರೀ. ಎಂ. ತಿಮ್ಮಪ್ಪಯ್ಯನವರಿಗೂ, ಅದನ್ನು ಓದಿ ಹಿತಸೂಚನಗಳನ್ನಿತ್ತು, ಪ್ರೂಫನ್ನೂ ನೋಡಿ, ಪರದೆಯೊಳಗೆ ನಿಂತು, ಪುಸ್ತಕ ಪ್ರಕಟನದ ಸಕಲ ವ್ಯವಸ್ಥೆ ಗಳನ್ನೂ ಮಾಡಿ, ತಮ್ಮ ಸ್ವಭಾವಾನುಗುಣವಾಗಿ, ಗುಪ್ತಸಹಾಯವನ್ನೊದಗಿಸಿದ ದಕ್ಷಿಣ ಕನ್ನಡದ ಆಧುನಿಕ ಸಾಹಿತ್ಯ ಪ್ರವರ್ತಕರಾದ ಶ್ರೀ. ಪಂ. ಮಂಗೇಶರಾಯರಿಗೂ, ಅವಿರತಶ್ರಮ, ಅನಿಯಮಿತೋತ್ಸಾಹಗಳಿಂದ ನನಗೆ ಕೈಗೊಟ್ಟ ಶ್ರೀ. ಉಳ್ಳಾಲ ಮಂಗೇಶರಾಯರಿಗೂ ಕೃತಜ್ಞತೆ ಸಲ ಬೇಕಾಗಿದೆ. ಹೊಸ ಕವಿತೆಯ ಸಾಹಸವನ್ನು ಆಶಾಪೂರ್ಣ ದೃಷ್ಟಿಯಿಂದ ಅವಲೋಕಿಸುವವರಿಗೆ, ಇದಕ್ಕೆ ಸರಿಯಾದ ಪ್ರೋತ್ಸಾಹ ದೊರೆತರೆ, ಇಂತಹ ಬೇರೆ ಪುಸ್ತಕಗಳನ್ನು ಹೊರಗೆಡಹುತ್ತೇನೆಂಬ ಭರವಸೆಯಿರಲಿ; ಹೊಸದನ್ನು ಮೆಚ್ಚದವರಿಗೆ, ನವೀನ ಕವಿತ್ವದ ಹುಚ್ಚಡಸಿದ ನನ್ನಂಥವರಿಂದ ಲೋಕ ಕ್ಕಾಗುವ ವಿಪತ್ತಿನ ಸಂಭವವಿನ್ನೂ ಕಡಿಮೆಯಾಗಲಿಲ್ಲವೆಂಬ ಅರಿವು ಇರಲಿ. ಹಣ್ಣು ಕಾಯಿಯ ಕೆಲವು ಪದ್ಯಖಂಡಗಳನ್ನುಪುತ್ತೂರಿನ ಕನ್ನಡ ಕೇಸರಿಯಲ್ಲಿಯೂ,ದಾರವಾಡದ ಜಯಕರ್ನಾಟಕದಲ್ಲಿಯೂ ಪ್ರಕಟಿಸಿದ ಆಯಾ ಸಂಪಾದಕರಿಗೆ ನನ್ನ ಧನ್ಯವಾದಗಳಿರಲಿ.

ಕಡೆಂಗೋಡ್ಲು ಶಂಕರಭಟ್ಟ.

1. ಹಣ್ಣು-ಕಾಯಿ

ನಂಬಿ ನಂಬಿ ಸವೆದ ಹೊತ್ತು
ಸಂದು ಹೋಯ್ತು ; ಬಾರದು !
ಮುತ್ತುಸುರಿದು ಮಾಲೆಗೈದೆ—
ಯಾರ ಕೊರಲಿಗರಿಯದು !

ಉಡುಗೆಯುಟ್ಟೆ, ತೊಡವ ತೊಟ್ಟೆ,
ಕಾಣಿಕೆಗಳನಿಟ್ಟೆನು ;
ಮೃತ್ಯುವಾಳ್ವ ಹಾಳುಗುಡಿಗೆ
ಬಾರೆನೆಂದ ನಾಥನು !

ನನೆಯ ಕೊಯ್ದೆ, ಬಲಿಯ ಗೆಯ್ದೆ,
ಹೊಸ್ತಿಲೀಚೆ ಕಾದೆನು ;
ಪಾಪ ದೀಪ ವುರಿವ ಮನೆಯ
ನೋಡೆನೆಂದನಾತನು.

ಹಣ್ಣುಕಾಯ ಹರಕೆ ಯಿತ್ತೆ
ಬಯಕೆ ಫಲಿಸಲೆನ್ನುತ ;
ಅಳಿವು ಗುಡಿಯ ನೆಟ್ಟ ಕಡೆಯ
ಕೂಡೆನೆಂದನಿನಿಯನು.

ಎದೆಯ ಮಿದುದು, ಒಲವನಗೆದು,
ಹಾಡೊಳಿಟ್ಟು ಕಳುಹಿದೆ ;
ನೆಲದ ಸೊತ್ತ—ಅಳಲ ತುತ್ತ
ಒಲ್ಲೆನೆಂದು ಬಿಸುಟನು.

2. ಕಾವ್ಯಸಮಾಧಿ

ಕವಿಯೇ! ಕಾವ್ಯಸಮಾಧಿಯೊಳೊರಗೈ!
ಅಮೃತಾನಂದದ ಪೀಠದೆ ಮೆರೆಯೈ!

ಗತಶತಮಾನದ ಬೇರ್ಗಳ ಬಿಟ್ಟು,
ನೂತನ ವರ್ಷದ ರೆಂಬೆಗಳಿಟ್ಟು,
ಜೀವನರಸಗಳ ಕಾಂಡಕೆ ಹೀರಿ,
ಯುಗಯುಗಗಳ ಹೂಬಲಿಗಳ ಬೀರಿ,
ಆದ್ಯಂತವ ಕಾಣದ ಹೆಮ್ಮರನದು
ತಲೆಮೇಗಡೆ ಹಸುರಿನ ಕೊಡೆ ಹಿಡಿವುದು.

ಅರಿವಿನೊಳೊರಗೈ! ಮರವೆಯೊಳೊರಗೈ!
ಬ್ರಹ್ಮಾನಂದದೆ ತೇಲೈ ಮುಳುಗೈ!

ವೇದದಿ ಬೋಧದಿ ಹುತ್ತವ ಕಟ್ಟಿ,
ವಾದವು ಸರ್ಪದವೊಲು ಬುಸುಗುಟ್ಟಿ,
ಬೆದರಿಸುತಿರುವುದು; ಮಾನವಕೋಟಿ
ಚೆದರುತಲಿರುವುದು ಚಿಲಿಪಿಲಿ ಗುಟ್ಟಿ ;
ನಿನ್ನಯ ಕಾವ್ಯ ಶರೀರದ ಸುತ್ತಲು
ಯುಗಧರ್ಮಗಳೇ ಹೆಣೆದಿವೆ ಎತ್ತಲು !

ಕವಿಯೇ! ಕವಿತೆಯ ಮೌನದೊಳೊಪ್ಪಿರು !
ವಿಶ್ವಾತ್ಮನ ಸುಸ್ವಪ್ನದೊಳಪ್ಪಿರು !

ತರಗೆಲೆಯಂದದೆ ಭಾಷೆಯ ಮೊತ್ತ
ಒಣಗಿಯೆ ಬೀಳ್ವುದು ; ಋತುಗಳ ಸತ್ವ
ಹಾವಿನ ಪರೆವೊಲು ಜಾರಿಯೆ ಜಗುಳ್ವುದು ;
ಲೌಕಿಕ ರಸ ಹಿಮು ಗಟ್ಟಿಯೆ ಮುಗಿವುದು ;
ಹಾವಗಳೆಲ್ಲವು ಭಾವಗಳೆಲ್ಲವು
ಕವಿ ನಿದ್ರೆಯೊಳೊಂದಾಗುತ ಬಾಳ್ವವು.

ಕವಿಯೇ! ಅಜರಾಮರ ಕಲ್ಪನೆಯುಲಿ
ನಿನ್ನಯ ಹೊಸಹೊಸ ಸೃಷ್ಟಿಗಳೊಪ್ಪಲಿ!

ತತ್ವದ ಶಾಸ್ತ್ರದ ಬಲೆಗಳ ಹೆಣೆಯುತ,
ಜಾಡರ ತೆರದಿಂದಲ್ಲಿಯೆ ಸುಳಿಯುತ,
ಅಣುವಿಂದಣು ಗುರುವಿಂಗುರು ಎನ್ನುತ,
ಅದನೇ ಸೆರೆಯುಲಿ ಹಿಡಿಯುಲು ಮುಸಗುತ,
ಶಕ್ತರ ಭಕ್ತರ ಪಡೆಗಳು ಬಂದರು,
ಕವಿಯೇ! ನೀ ಮೌನದೊಳೇ ನಿಂದಿರು!

ಕವಿಯೇ! ಎಲ್ಲಾ ರಸಗಳು ನಿನ್ನಲಿ
ಒಡ್ಡುತ ಒಂದೇ ಹೊನಲಲಿ ಹರಿಯುಲಿ!

ತೋಳೊಳು ಬಾಳೊಳು ಒಸರುವ ವೀರವು,
ನಗೆಯುಲಿ ಮುಗುಳಾಗುವ ಶೃಂಗಾರವು,
ಕಲ್ಲನು ಕರಗಿಪ ದಾಹದ ಕರುಣೆಯು,
ಯೋಗಿಯ ಮೂಗಿನ ಮೊನೆಯಾ ಶಾಂತಿಯು,
ಹಲವೆಡೆ ಹರಿದೊಂದೆಡೆ ನೆರೆಯೇರಲಿ!
ನಿನ್ನ ಸಮಾಧಿಯೊಳೋಕುಳಿಗೈಯುಲಿ!

ಕವಿಯೇ! ಎಲ್ಲರ ಹೃದಯುದ ಮೆಲ್ಲುಲಿ
ನಿನ್ನೀ ಯೋಗದ ಶಾಂತಿಯ ಸೇರಲಿ!

ಭೇರಿಯು ತಂಬಟೆಗಳ ಕಹಳೆಗಳಾ—
ರಣದುಂದುಭಿಗಳ ಶಸ್ತ್ರಾಸ್ತ್ರಗಳಾ—
ಸಾಮದ ಗಾನದ ಪಾಟದ ಬೇಟದ
ಅಳುವಿನ ನಗೆಗಳ ವಿವಿಧ ನಿನಾದ,
ಪಡಿನುಡಿಯಾಗುತೆ ಓಂಕಾರದೊಳೇ
ಸೇರಲಿ ನಿನ್ನ ಅಹಂಕಾರದೊಳೇ!

ಕವಿಯೇ! ಯೋಗಾಸನವಿಹ ನೆಲೆಯಲಿ,
ಯುಗಪರಿವರ್ತನ ವೇಷಗಳೊಪ್ಪಲಿ!

ಗೆಯ್ಮೆಯಕಾಡೋ ತಿಳಿವಿನ ಪೊದರೋ!
ಮನುಜರ ಕೃತ್ರಿಮ ಮಹಿಮೆಯ ಪದರೋ!
ಅಳಿವಿನ ಗರ್ಜಿಪ ತರ್ಜಿಪ ಹುಲಿಯೋ!
ಬಾಳ್ವಿಯ ಪುಟನೆಗೆದೇಳುವ ಹುಲ್ಲೆಯೊ!
ವಾನರರೋ ನರರೋ ಮತ್ತಾರೋ!
ಬಾಳಲಿ, ನೀನಿನ್ನೊಳೆ ಮರೆಸೇರೋ!

ಕವಿಯೇ ಭಾವಾಕಾಶದಿತೇಲ್ವೈ!
ಹೆಸರಿಲ್ಲದೆ ಮೆಯ್ಯಿಲ್ಲದೆ ಬಾಳ್ವೈ!

ಬಾಡಿದ ಮುಗುಳಂದದೊಳೀ ಮನುಜರು,
ಹುಟ್ಟಿದ ನೆಲೆಯೊಳೆ ಕೋಡುತ ಕೆಡೆಯಲು
ಕವಿಯೆದೆಯೆಸಳನು ಕೊಕ್ಕಿನೊಳಿಟ್ಟು
ಕಾಲವು ಕೊಂಡೊಯ್ವುದು ನೆನಪಿಟ್ಟು;
ಹಾಡಿನ ಗೂಡನು ಕಟ್ಟುವುದಾ ಕಡೆ
ಅಲ್ಲಿಯೆ ನಿನ್ನಯ ಯೋಗದ ನಿಲುಗಡೆ!

ಕವಿಯೇ! ಮರುಳೆನ್ನಲಿ ಹುರುಳೆನ್ನಲಿ
ಲೋಕವು, ನಿನಗೆ ಸಮಾಧಿಯೆ ಒಪ್ಪಲಿ!

ರೂಪಿಲ್ಲದ ಮನೆಯಿಲ್ಲದ ಮಂದಿಯ
ರೂಪಿನ ನೆಲೆಯನು ಹಿಡಿಯುವೆನೆಂಬೆಯ?
ಹಿಡಿವೆಯೊ ಹಿಡಿಯೆಯೊ? ನಮಗಾಗೊಡವೆಯೆ?
ನಿನ್ನ ಸಮಾಧಿಯ ಗುಡಿ ಮೇಗಡೆಯೇ
ಪ್ರಣವನಿನಾದವು ಪ್ರಲಯವಿವಾದವ
ಮರೆಯಿಸಿ ಹೀರ್ವುದು ಯೋಗದ ಮೌನವ.

3. ಮಗು

ಸುಗ್ಗಿಯ ಚಿಗುರೇ! ಸಗ್ಗದ ಹೊಗರೇ!
ನಳನಳಿಸುವ ಬದುಕಿನ ಕೊನರೇ!
ಎಳನಗೆ ಬಾನಿನ ಹೊನ್ನಿನ ನೇಸರೆ!
ಕೋಡಿಹರಿವ ಜೀವನದೊಸರೆ!

ಕಂದಾ! ಎನ್ನುತ ಕರೆವೆನು ನಿನ್ನನು,
ಭವರಾಜ್ಯದ ಪಟ್ಟವನೇರೆ
ಬಂದಾ! ಯುವರಾಜನು, ಎಂದೆನ್ನುತ
ಕುಣಿಕುಣಿವುದು ನನ್ನಧಿಕಾರ.

ಮುದ್ದಿಪೆ ಮೊಗವನು, ತಿದ್ದುವೆ ಕುರುಳನು,
ಎತ್ತುವೆ ನಿನ್ನನು ಹಿಡಿಹಿಡಿದು;
ಅಳಿಸುವೆ, ನಗಿಸುವೆ ನಿನ್ನಯ ನುಣ್ಬಗೆ
ಬೆಡಗನು ನೋಡುವ ಸಡಗರಕೆ.

ಅಕ್ಕಟ! ಅರಿತೆನೆ ಮಕ್ಕಳ ಮೋಡಿಯ
ಮುದ್ದಿಪ ತಿದ್ದುವ ಮಾಯಾವಿ
ಚೊಕ್ಕಟಗೊಳಿಪನೊ? ರೂಪವ ಕೆಡಿಪನೊ?
ಎನ್ನೀ ಸೊಬಗಿಗೆನಿತು ಬಾರಿ?

ಕೆಂದುಟಿಯಲಿ ಲಾಲಾಜಲ ಒಸರ್ವುದು;
ಕದಪನು ಮುಸುರ್ವುದು ಕಣ್ಣೀರು;
ಹಣೆಯಲಿ ದುಗುಡವು ಕತ್ತಲಿಸುತ್ತಿದೆ;
ನಗು ತುಟಿಯಲಿ ಗುಳುಗುಳಿಸುವುದು.

ಬೊಮ್ಮನು ಬರೆದಾ ತಿಟ್ಟವಿದೇನೈ?
ಕಾಲನು ಮಿಾಂಟದ ವಲ್ಲಕಿಯೊ?
ಬಯಕೆಯ ಹಂದರಿನಲಿ ತೂಗಾಡುವ
ತಂಪಿನಕಂಪಿನ ಕಿರುಮುಗುಳೊ?

ನೀನಾರೋ ಇನ್ನೆಲ್ಲಿಂ ಬಂದೆಯೋ ?
ಆವೂರಿಗೆ ನಿನ್ನಯ ದಾಟಿ ?
ಹಾಡಲು ಬಂದೆಯೊ ? ಸೆಣಸಲು ಬಂದೆಯೊ
ಸಮಯದೊಳೀ ಸೀಮೆಯ ದಾಟಿ ?

ಹರಯವು ಕುಡಿಯಿಡೆ, ಬಿಸಿಲಿಗೆ ಬೇಗೆಗೆ
ಮಳೆಗಾಳಿಗೆ ಬಿರುಸುಟ್ಟುರೆಗೆ
ಅದಿರದೆ ಮುದುರದೆ ಹಸರಿಸುತಿರಲೈ!
ಇದೆ ಸೈಪಲ್ಲವೆ ಬಾಳುವೆಗೆ?

ದಿಟವನು ಮರಸುವೆನೆಂತೆಲೆ, ಕಂದಾ?
ಹಾರುವ ವರ್ಷದ ಬಳಿಬಳಿಯೆ
ಗಜರಿಸುತಿರುವುದು, ಗರ್ಜಿಸುತಿರುವುದು,
ಜೀವನಗಳ ನುಂಗುವ ಕಣಿವೆ.

ನಗುತಿರು ಮಗುವೇ, ನಗುತಿರು ! ಸುಮ್ಮನೆ—
ನಗೆಗಿರುವುದು ನಿಮಿಷದ ಬಾಳು.
ಅಳದಿರು, ಕಂದಾ, ಅಳದಿರು ! ದುಗುಡವೆ
ಗತಿಯು ಕೊರೆವ ಕಾಡಿನ ಹೊನಲು.

ಹಾಡುವರೆಲ್ಲಿಯೊ ಹರಸುವರೆಲ್ಲಿಯೊ
ನಮ್ಮಾ ಹೋರಾಟದ ಕಳದಿ ?
ಲಗ್ಗೆ ಪರೆಯ ಬಾಜಿಸಿ ಮುನ್ನುಗ್ಗುವ
ಕಾಲನ ಬಿನದದ ದಳದುಳದಿ—

ಮುರಿವುದು ಮಗುವೇ ! ಹರಿವುದು ಕೋಟೆಯ
ಕೊತ್ತಳವೆತ್ತಲು ದೂಳಾಗಿ ;
ಸೆರೆಯಲಿ ಸಿಲುಕರೆ ಹಾಡುವ ಹರಸುವ
ಪಂಡಿತರೆಲ್ಲರು ಮುಂದಾಗಿ ?

ಪರಮಾತ್ಮದ ಕುಡಿಯಿದು ಜೀವದ ಮಿಡಿ—
ಬೆಳೆಯಲಿ ಕಳೆಯಲಿ ಕೆಂಪಾಗಿ!
ಮಿರುಗಲಿ ಇಹಲೋಕದ ಬಿಸಿಲುಣ್ಣುತ
ಬಗೆಬಗೆ ಬಣ್ಣದ ಬಿಂಕದಲಿ.

ತೊಟ್ಟು ಕಡಿದು ಜಾರುವ ವೇಳೆಗೆ ಪರಿ
ಪೂರ್ಣರಸದ ಪರಮಾನಂದ
ತೊಟ್ಟಿಡಲಿದುವೇ ಹುಟ್ಟಿನ ಫಲವಿದೆ
ಬಾಳ್ವೆಯು ಬಳ್ಳಿಯು ಬಲುಚಂದ.

ನಮ್ಮಯ ಪರಿಯಿಂತಾದರು, ನೀನಿಂ
ದೆನ್ನಯ ಮಡಿಲಲಿ ಮಂಡಿಸಿರೆ,
ಮರೆವೆನು ಮುಂದನು, ನೆನೆಯೆನು ಹಿಂದನು,
ತೆರೆ ಮರೆಯಿಕ್ಕುವೆ ಮೃತ್ಯುವಿಗೆ.

ನೀನೆನ್ನಯ ಪುಣ್ಯದ ನಿಧಿ, ಕಂದಾ!
ಎನಗಿರುವಿಹಲೋಕದ ಬಂಧ!
ಯುಗಯುಗಜನ್ಮದಿ ಆತ್ಮವ ಕಡೆಯುತ
ಮೇಲುಕ್ಕಿದ ನವನವನೀತ!

ಆಳಲೆ ಮಗುವೇ! ಬಾಳಲೆ ಮಗುವೇ!
ರಾಜ್ಯವಭೋಜ್ಯವನನುಭವಿಸು!
ದೇಶದ ರಾಷ್ಟ್ರದ ನಾನಾಜನತೆಯ
ಜೀವವೆ! ಅಮರತ್ವವ ಗಳಿಸು.

ನಗೆಯನೊ ದುಗುಡವನೋ ಕಣ್ಣೀರನೊ
ನಿಟ್ಟುಸಿರನೊ ನಿರ್ವೇದವನೋ
ಗೆಯ್ಮೆಯೊಳಡಗಿಸಿ, ಹೆಮ್ಮೆಯನುಡುಗಿಸಿ,
ಅಜರಾಮರ ಕೀರ್ತಿಯ ಬಿತ್ತು.

4. ಹುಟ್ಟುನಾಡು

ಹಲವುನಾಡನು ಸುತ್ತಿ, ಹಲವು ದೇಶದಿ ತಿರಿದು,
ಹಲತೆರದ ಜೀವನದ ಸುಖದುಃಖದಲಿ ನವೆದು,
ತೊಳತೊಳಲಿ ಬಯಕೆಯಲಿ, ದಾರಿಗಾಣದೆ ನೊಂದು,
ಬಳಲಿ ಬಸವಳಿವ ಜೀವದ ಹಕ್ಕಿ ಬೇವಸವ
ಇಳುಹಿ, ಕೊನೆಗಾಲದಲಿ ಕಣ್ಮುಚ್ಚಲೆಳಸುತಿರೆ,
ಅದಕೆ ಮರೆಗೊಡಲೊದಗುತಿರುವ ಗೂಡಾವುದೈ ?
ಸಂಕಟವ ತವಿಸುತ್ತ, ಶಾಂತಿಯನು ಸವಿಸುತ್ತ,
ಬಾಳಿಸುವುದಾವುದೈ ಹುಟ್ಟುನಾಡಲ್ಲದಿರೆ ?

ಅಲ್ಲಿ ಹುಟ್ಟುವ ಸುಗ್ಗಿಗಳಿವುಂಟೆ? ಮಾಮರದಿ
ಸೊಲ್ಲಿಸುವ ಅರಗಿಳಿಯ ಮೆದುನುಡಿಗೆ ತೊದಲುಂಟೆ ?
ಕೋಗಿಲೆಯ ಹಾಡೊಸರ ಹೊನಲು ಬತ್ತುವುದುಂಟೆ ?
ರಾಗದಲಿ ಮೊರೆವ ತುಂಬಿಯ ದನಿಗೆ ಬರವುಂಟೆ ?
ಊದುತಿಹ ತಂಗಾಳಿ ನೊಂದವರ ಮನದೊಳಗೆ
ಊದುತಿಹುದಾವೋದವನು, ಕಿವಿಯೊಳೊರೆಯುತಿದೆ—
“ ಧರಣಿಯಲಿ ಸೊಬಗಿಹುದು, ಜೀವನದಿ ಹುರುಳಿಹುದು,
ಕರಿಯ ಮುರುಕದ ಮೋಡದೊಳಗಾಸೆ ಮಿಂಚುವುದು. ”

‘ ಎನಿತೊ ನಾಡುಗಳಿಹವು ಬ್ರಹ್ಮಾಂಡ ಮಧ್ಯದಲಿ;
ಗಣನೆಗಳವಲ್ಲದಿಹ ವೈಭವವ ಪಡೆದಿಹವು;
ಒಂದನೆಡೆಗೊಂಡು ನೆಲದೊಳೆ ಸಗ್ಗ ಸೊಗಗಳನು
ಹೊಂದಲಾಗದೆ ನಿನ್ನ ಹಾಳೂರ ಹಂಗೇನು ? ’
ಎಂದು ನುಡಿವರೆ ? ಎನ್ನ ಕೊಲಲು ಮಾತಾಡುವರೆ ?
ಆವ ಬಯಕೆಗಳಿಲ್ಲದಿರುವೆನ್ನ ಜೀವನವ
ಸಾವು ತುತ್ತುವ ಮೊದಲೆ, ಕೊನರೇರಲೀ ಆಸೆ
ಹುಟ್ಟೂರ ನೆನೆದು ಕಂಬನಿ ಮಿಡಿಯುವೀ ಆಸೆ!

ಹಲವು ನಾಡುಗಳಿಹವು, ಹಲವು ವಿಭವಗಳಿಹವು,
ನೆಲದೊಳೇ ಸ್ವರ್ಗವಿಹುದೆಂಬ ನುಡಿ ನಿಜವೆನಲು,
ಹಲವು ನಾಡಿನೊಳಾನು ಜನನ ಪಡೆದೆನೆ ? ಕಾಡು
ನೆಲದೊಳೇ ಕಣ್ದೆರೆದೆನೆಂದರೇನಿದು ಹುಸಿಯೆ ?
ಆ ನಾಡನರಸುತೆನ್ನಯ ನೆನಹು ಸುತ್ತುತಿದೆ,
ಆ ನಾಡನೆನ್ನಣಿಕೆ ಬಿಡದೆ ಬೆಂಬತ್ತುತಿದೆ,
ಆರೇಕೆ ದೂರುವರು ? ಎನ್ನ ಜೀವದ ಬೇರ
ಕೀಳಲೆಂದೇಕೆ ಕೈನೀಡಿ ತವಕಿಸುತಿಹರು ?

ಮರವೆಯುಲಿ ಮೆಯ್ಮರೆದು ಮಲಗಿದನನೆಬ್ಬಿಸುತ
'ಇರುಳು ಕಳೆದುದು ನೋಡು ಹಸುಳೆ ನೇಸರ' ನೆನುತ
ಹರಕೆ ಹಾಡನು ಹಾಡಿ, ತೊದಲು ನುಡಿಗಳ ತಿದ್ದಿ,
ಕರವ ಹಿಡಿಯುತ, ಅಳುಕು ಹಜ್ಜೆಗಳ ಬಲಿಯಿಸುತ,
ಶಿರವನಾಘ್ರಾಣಿಸುತ, ಕದಪ ಚುಂಬಿಸುತೆನ್ನ
"ಧರೆಯ ಸಮರಕೆ ಹೋಗು, ಗೆಲವು ನಿನಗಹುದೆ"ಂದು
ಕಳುಹಿಸಲು ಜಗದೊಡೆಯನೀ ನಾಡಿಗೈತಂದೆ
ತಿಳಿವುಗಣ್ಣನು ತೆರೆದೆನಿದೆ ಹುಟ್ಟುನಾಡೆಂದೆ.

ಎಳೆತನದ ನಸುಕಿನಲಿ ದುಃಸ್ವಪ್ನಗಳ ಕಂಡು,
ಅಳುತಲೆಚ್ಚರುತ ಚೀರಿಡಲೆನ್ನ ತಕ್ಕೈಸಿ,
"ಮಲಗು ಮಗನೇ ಮಲಗು, ಕುಳಿರುಗಾಳಿಗೆ ಮೆಯ್ಯ
ಕೊಳಿಸ ಬೇಡೆ"ಂದೆನುತ ತೂಗುದೊಟ್ಟಿಲೊಳಿಟ್ಟು,
ಸವಿಯಾದ ಜೇನೆಯ್ಯ ಸುರಿವ ಧಾರೆಯ ತೆರದಿ
ಕಿವಿಗೆ ಜೋಗುಳದೊಡನೆ ಪ್ರೇಮಾಮೃತವ ಸುರಿಸಿ,
ಬಳೆಯಿಸಿದ ಹೆತ್ತಬ್ಬೆ ಬಗೆಯ ಹರಕೆಗಳಿಂದ
ಒಲಿಸಿದಳು ದೈವವನು ತನುಜಗೀ ನಾಡಿನಲಿ !

ಇನಿತರಿಂದಲೆ ಮನದ ಮೋಹವಲ್ಲೆನಗಿಲ್ಲಿ
ಮರುಕದೊಂದಿತಿಹಾಸವುಂಟು. ಪೂರ್ವದೊಳೆನ್ನ
ಕೈಹಿಡಿದು ನಡೆಗಲಿತು, ತೊದಲಿಂದ ನುಡಿಗಲಿತು,
ಒಂದೆ ಹಂತಿಯು ಒಂದೆ ಹಸೆಯು ಕೂಟದೆ ಕಲೆತು,
ಬೆನ್ನ ಬಿಡದಿರ್ದ ನೇಹಿಗರೆನಿಬರೋ ಇಲ್ಲಿ
ಬೆನ್ನನೂ ಬಿಟ್ಟರಿಹ ಲೋಕವನು ಬಿಟ್ಟಿಹರು,
ಅವರ ಕೂಟವನೆನೆದು ಹುಡುಹುಡುಕಿ ತಡತಡಕಿ
ಎತ್ತೆತ್ತ ಸುತ್ತುತಿದೆ ಚಿತ್ತವೀ ನಾಡಿನಲಿ !

ಇಲ್ಲಿರುವ ಲತೆಯೊಂದು, ಗಿಡವೊಂದು, ಮರವೊಂದು,
ಬಳ್ಳಿಮನೆಯೊಂದು, ಮತ್ತಾವುದಾದರದೊಂದು,
ಎಮ್ಮ ಬಾಲ್ಯದ ಬೆಡಗಿನಾಟಗಳ ಕೂಟಗಳ
ಹೆಮ್ಮೆ ಪಂತಗಳ ಕತೆ ಹೇಳಬಹುದಿಲ್ಲಿರುವ
ಗುಯ್ಯೆಂಬ ಹೇರಡವಿ, ಎಮ್ಮ ಬಾಲ್ಯದೊಳುಕ್ಕಿ
ದುಲ್ಲಾಸದುಬ್ಬರದ ಬೊಬ್ಬೆಗಳ ಹಿಡಿದಿಹುದು ;
ಪಡಿನುಡಿಯೊಳೆಲ್ಲವನು ನುಡಿನುಡಿದು ನೆನೆಯುತಿಹೆ,
ಎಂದಾದರೂ ಬಹನೊ ಎಂದಿದಿರು ನೋಡುತಿದೆ.

ಇಂದು ಯೌವನವು ಗುಡಿಗಟ್ಟಿ ನಿಲಲಿದೆ, ಮೊಗದ
ಮಂದಹಾಸದ ಮುಗುಳು ಎದೆಗಂಪನುಗುಳಲಿದೆ,
ಪ್ರೇಮರಸ ಮಕರಂದ ಕಾಲಾಗಿ ಹರಿಯಲಿದೆ,
ನೇಹಿಗರ ನೆರವಿ ಬರಲಿದೆ ತುಂಬಿ ಹಿಂಡಂತೆ,
ಆವ ಸಮಯಕೆ ಮಾಯವಾಗಲಿರುವುದೊ ಸುಗ್ಗಿ ?
ಜಾರಿ ಚಿಗುರಿನ ರೂಪು, ತರಗೆಲೆಯು ಮುಪ್ಪಕಾ
ಲೂರುವುದೊ? ಅಂದೆನಗೆ ಎಳವೆಯಾ ಕನಸುಗಳ
ಕಪ್ಪ ಕೊಡುವವರಾರು ಹುಟ್ಟು ನಾಡಲ್ಲದಿರೆ ?

ಮೋಡ ಮೊಳಗುವುದುಂಟು, ಕಡಲು ಹಾರುವುದುಂಟು,
ರೇಗಿ ಬೆದರಿಸಲುಂಟು ಬಿರುಗಾಳಿ, ಆಗಸದಿ
ಲಾಗಿಸುವುದುಂಟು ಮಿಂಚಖಿಲ ಬ್ರಹ್ಮಾಂಡವದು
ಕೂಗಿ ಮೊರೆಯಿಡಲುಂಟು, ಸೃಷ್ಟಿ ಬೆರ್ಚುವುದುಂಟು,
ಆಗ ಹೊಡಕರಿಪ ತೆರೆಗುದುರೆ ಏರುತೆ ಮೃತ್ಯು
ವೇಗದಿಂದೈತರಲು, ಎನ್ನೊಡಲ ದೋಣಿಯನು
ಆವ ದಡಕೊಂದಿಸುವೆ ? ಎಲ್ಲಿ ಕಟ್ಟುವೆನೆಂಬ
ಭೀತಿಯೇನಿದೆ? ಎನ್ನ ನಾಡೊಂದು ಮರೆಗೊಡಲು.

ಎದೆಯು ಬಿನ್ನಣವಿಂದು ಹಾಡಾಗಿ ಸೂಸುತಿದೆ—
ಅದಕೆ ಸಪ್ತಸ್ವರವ ಕಲಿಯಿಸಿದನಾರಯ್ಯ ?
ನೆನಹು ಬೆಡಗಿನ ಚಿತ್ರಗಳನು ಬರೆಯುವುದದಕೆ
ತರತರದ ಬಣ್ಣಗಳ ತಂದಿತ್ತನಾರಯ್ಯ ?
ಪ್ರಕೃತಿ ದೇವಿಯ ಮಡಿಲ ಮೇಲಾನು ಮಲಗಿದ್ದೆ,
ಮರವೆ ಮುಸುಕಿನ ನಿದ್ದೆಯಿಂದಲ್ಲಿ ಬಿದ್ದಿದ್ದೆ,
ಕನಸಿನಲಿ ಬಂದು ಕರುಣಿಸಿದನೋರ್ವನು, ಕಣ್ಣ
ತೆರೆವ ಮೊದಲೇ ಕಳ್ಳನಡೆಯೊಳೋಡಿದನಲ್ಲಿ.

ಸೊಡರ ಕುಡಿ ನೆಗೆನೆಗೆದು ಗರಿಕಲರಿವುದು, ತನ್ನ
ಗುಡಿಯು ಹಣತಿಗೆಯೊಳಾರಿಟ್ಟನೆಂದರಿವುದೇ ?
ಬೀಸೆ ಮೆಲ್ಲೆಲರು ಕುಣಿಕುಣಿದು ಕೊಂಕಿಸಿ ಕೊನೆಗೆ
ಗಾಸಿಗೊಂಡಿರ್ದ ತಾಣದೊಳೆ ನಂದುವುದಲ್ತೆ ?
ಆರೊ ಏತಕೊ ತಂದು ಬಿಟ್ಟರೀ ಜೀವವನು
ಎಂಬ ಗಸಣೆಗಳೇಕೆ ? ಚೈತನ್ಯವಿರುವನಿತು
ಸವೆವೆನೀ ದೇಹವನು ಹುಟ್ಟೂರ ನೆನಹಿನಲಿ
ಉಸಿರಡಗೆ ಎಸೆವೆನಿದ ಹುಟ್ಟೂರ ಮಣ್ಣಿನಲಿ.

ಅಲ್ಲಿಯಾವನೊ ಶಿಲ್ಪಿ ಈತನುವ ಕೆತ್ತಿದನು;
ಅಲ್ಲಿಯೇ ಮನುಜ ರೂಪದ ಮುದ್ರೆಯೊತ್ತಿದನು;
ಹರಿವ ಗಾಳಿಯನೂದಿ ಹರಣವಿತ್ತನು, ಮೂಡು
ವೊರತೆಯಿಂದಲಿ ಭಾವದೊರತೆಯನು ರಚಿಸಿದನು,
ಅರಲ ನಸುನಗೆಯಿಂದ ನಗೆಯ ನಿರ್ಮಿಸಿ, ಮತ್ತೆ
ಸುರಿವ ಮಂಜಿನ ಹನಿಯ ಕಣ್ಣೀರನೆಸಗುತ್ತೆ,
ಈ ಕಿರಿಯ ಮೂರ್ತಿಯನು ಸವೆದನೀ ನಾಡಿನಲಿ
ಮರೆವೆನೇ ತೊರೆವೆನೇ ಈನಾಡನೀಭವದಿ ?

“ ಎಲ್ಲವಳಿವುದು ಲೋಕವೆಂಬುದಿದು ಬರಿ ಸುಳ್ಳು !
ಅಳಿವುದನು ಬಿಟ್ಟಳಿಯದಿರುವ ಹುರುಳನು ಹಿಡಿದು
ಬಾಳ ಬೇಕೆ”ನ್ನುವರು; ಹುಟ್ಟು ಹರಿದಳಿಯದೇ?
ಅಳಿದರಳಿಯಲಿ ! ಅಳಿವು ಜನ್ಮಗಳ ತರುತಿರಲಿ !
ಅಳಿಯಾಗಿ ಗಿಳಿಯಾಗಿ ಹುಟ್ಟೂರ ನುತಿಸುವೆನು,
ಎಲರಾಗಿ ಅಲರಾಗಿ ಹುಟ್ಟೂರನರ್ಚಿಪೆನು,
ಚಿಗುರಾಗಿ ಲತೆಯಾಗಿ ಹುಟ್ಟೂರ ತಳ್ಕೈಪೆ,
ಜಗದೊಳೆನ್ನಯ ಬಾಳ್ಕೆ ಸಫಲವಾಯ್ತೆಂದೆಣಿಪೆ !

5. ಚಂದ

ಬಲುಚಂದ ಬಲುಚಂದ
ನಿನ್ನ ನುಣ್ಮೊಗದಂದ—
ಬಲುಚಂದವಲ್ಲವೇ ಹೆಣ್ಣೆ!

ಆಣೆಯಿಟ್ಟಾಡುವೆನು—
ನಿನ್ನ ಸುಳಿಗುರುಳಾಣೆ—
ನಿನ್ನ ನಗೆಗೆಣೆಯುಂಟೆ? ಕಾಣೆ!

ರೂಪವಿದು ಹುಸಿಯೆಂದು,
ನಲ್ಮೆಯೆನೆ ಸಟೆಯೆಂದು,
ಚಾಡಿಯೊರೆಯುವನು ವೇದಾಂತಿ.

ನಿಜವೆಂಬುದದೆ ನಿಜವೊ?
ಸಟೆಯೆಂಬುದದೆ ಸಟೆಯೊ?
ಅರಿವನೇ ಬಡತತ್ವವಾದಿ?

ಕದಪಿನಲಿ ಹೊಸಗೆಂಪು;
ನುಡಿಗೆ ನಲ್ಮೆಯ ತಂಪು
ಗಮನದಲಿ ಗರುವಿಕೆಯ ಸೊಂಪು.

ಹೊಚ್ಚಹೊಸ ಸೃಷ್ಟಿಯಿದು
ಹಳೆಯುದನು ಮರೆಯಿಪುದು
ಮಚ್ಚರಿಸುತಿದೆ ಜನರ ಗುಂಪು,

ನಿನ್ನೊಲವೊ? ಸಗ್ಗದಾ
ನಂದನದ ತಾವರೆಯು
ಎದೆಸೊದೆಯು ಸೂರೆ ಮಾಡಿರದೆ?

ನಿನ್ನ ರೂಪವೊ? ಸುಗ್ಗಿ
ಬಣ್ಣದಾ ಕನಸಿಂದ
ಬರೆದ ಬೆಡಗಿನ ಚಿತ್ರವಹುದೆ?

ನಳನಳಿಸಿ ಬಳೆ ಹೆಣ್ಣೆ!
ಗರಗರಿಕೆ ತಳೆ ಜಾಣೆ!
ಸೌಂದರ್ಯರಸದೊಸರ ಹಣ್ಣೆ!

ವಿಶ್ವಮೋಹನ ಶಕ್ತಿ
ಸಾಗರದ ಕಿರಿಮಿಾನೆ!
ನಿನ್ನಿಂದಲೀ ಸೃಷ್ಟಿ ಧನ್ಯೆ!

ಗಳಹುತಿರುವನು ಜೋಗಿ,
ಒಳವ ತಿಳಿಯನು ಭೋಗಿ,
ಸಟೆಯು ನುಡಿವನು ಸತ್ಯವಾದಿ.

ಸೊಬಗಿನಾ ಬಿತ್ತರದಿ
ದೈವಕಳೆ ಮಿಂಚುತಿದೆ;
ಅದಕೆ ಮರುಳಪ್ಪುದೀ ಬುದ್ಧಿ!

6. ವಾಸನೆ

ಎಲ್ಲೆಲ್ಲಿಯೋ ಕೇಳ್ದ ರಾಗಿಣಿಯ ಮೆಲ್ಲುಲಿಯು
ಮರವೆಯಲಿ ಮರೆಯಾಗಿ ಕೇಳದಾಯ್ತು ;
ಅದರ ರಸದಾನಂದದನುಭವದೆ ಪುಲಕಗಳು
ಗುಡಿಗಟ್ಟಿ ಮೇಲೆದ್ದು ನಿಂತಿರ್ದುವು !
ಪುಲಕಗಳ ಹೊದರ ತುಳಿದೆದ್ದೆದ್ದು ಬಂದಳದೊ
ಕಲ್ಯಾಣಿಯೊರ್ವಳೆನ್ನೆದೆಯ ಬಳಿಗೆ !
ಅವಳೆ ರಾಗಿಣಿ— ಸರಸ ಕಲ್ಯಾಣಿ, ಶಂಕರಾ
ಭರಣ ರೂಪಿಣಿ, ಅವಳೆ ಕೀರವಾಣಿ.

ಆವುದೋ ಕನಸಿನಲಿ ತಾರೆಯೊಂದನು ಕಂಡೆ,
ನೆನಹಿನೊಳದೆಲ್ಲಿಯೋ ಕಾಣದಾಯ್ತು;
ಯೌವನದ ನೆನಪಿನಲಿ ಮೆಯ್ಗೊಂಡು ನಿಂತುದದು,
ನೀರೆಯೋರ್ವಳ ನಯನ ತಾರೆಯಾಯ್ತು.
ಹೋದಕಾಲದೊಳೊಂದು ಬಳ್ಳಿಮಾಡದೊಳೊರಗಿ
ನಗುವ ಕಮಲವ ಕಂಡು ಕನವರಿಸಿದೆ;
ಅದೆ ಕಮಲ ಮುಖವಾಗಿ, ನೀರೆಯಳ ಮುಖವಾಗಿ,
ಸಿರಿಗೆ ತವರಾಗಿ ಬಂತೆನ್ನ ಬಳಿಗೆ.

ಹಲವು ವಾಸನೆ ಏಕೆ ? ರಾಗ ವಾಸನೆಯೊಂದು ;
ತಾರಗೆಯ ಹೊಗರ ವಾಸನೆಯದೊಂದು ;
ಜೀವನದ ಸರಸಿಯಲಿ ಸರಸಹಾಸವ ಬೀಸಿ
ನಗುವ ಕಮಲದ ಸುವಾಸನೆಯದೊಂದು ;
ಬೇಕಾದರೆನ್ನ ಭವಭವದಿ ಸುತ್ತಾಡಿಸಲಿ
ಲೋಕದಿಂ ಲೋಕಕ್ಕೆ ಚೆಂಡಾಡಲಿ !
ಪಾಪಗಳ ತರಲಿ ! ಶಾಪವ ತರಲಿ ! ನರಕದೊಳು
ವಾಸಿಸುವೆನೆನ್ನ ವಾಸನೆಯ ಕೊಂಡು.

7. ಹಳ್ಳಿಯ ಹುಡುಗಿ

ಯಾರೀ ಹುಡುಗಿ ?
ಹಳ್ಳಿಯ ಬೆಡಗಿ ?
ಕಾಮನ ಬಡಗಿ
ಕೆತ್ತಲು ತೊಡಗಿ,
ರೂಪವ ಬರೆದು,
ಜೀವವ ನೆರೆದು,
ಗೈದನೆ ಚೆಲುವಿನ
ಬೊಂಬೆಯ ಕೊರೆದು ? ||

ಬಿಂಕವ ಕಲಿಯದೆ
ಕೊಂಕುವ ನೋಟ—
ಜವ್ವನರೆದೆಯನು
ಕೊರೆಯುವ ಕೀಟ ;
ಕಾಡಿನ ಜೋಗಿಗೆ
ಮಾಡಿದ ಮಾಟ ;
ಹಳ್ಳಿಯ ಮುಗುದೆಗೆ
ಎಂತಹ ಬೇಟ ? ||

ನೋಡಿರಿ ! ನಗುವಳು—
ಮುದ್ದಿನ ನಗೆಯಿದು;
ಮೋಹದ ಅಗೆಯಿದು ;
ಚೆಲ್ವಿನ ಹೊಗೆಯಿದು ;
ಚೆಲುವರ ಸೊಬಗರ
ಹೆಮ್ಮೆಯ ಕೊರೆಯುವ
ಜನ್ಮವನರೆಯುವ
ಮದ್ದಿನ ಬಗೆಯಿದು. ||

ಅಯ್ಯೋ! ಲಜ್ಜೆಯ
ದಾಂಗುಡಿಯಿವಳು.
ಹುಸಿನಗು ಮೂಡುವ
ಬಳ್ಳಿಯ ಕವಲು.
ತನಗಾಗಿಯೆ, ತ—
ನ್ನೆದೆ ತಣಿಯುಲೆ, ಸು—
ಮ್ಮನೆ ನಗುತಿರುವಳು,
ಬರುವಳು ಬಿಮ್ಮನೆ ! ||

ಮಲ್ಲಿಗೆ ಹಳ್ಳಿಯ
ರಾಣಿಯೊ ಇವಳು !
ಜಾಜಿಯ ಪೂಜೆಯ
ದೈವವೊ ಇವಳು !

ಸಂಪಿಗೆ ಸೊಂಪಿನ
ಹಾಡಿನ ರಾಗವೊ ?
ಸಾವಿಗೆ ನೋವಿಗೆ
ಹಿಡಿದಾ ರೋಗವೊ ? ||

ಎಂತಹ ರೂಪೋ!
ಎಂತಹ ನುಣುಪೋ!
ಮುಂಜಾವದ ಬಿಸಿ
ಲಿಗೆ ಬಾಡುವಳು.

ತಂಗಾಳಿಯ ತೀ
ಟಕೆ ಕೋಡುವಳು.
ನೆಳಲನು ಕಂಡೇ
ಬೆದರೋಡುವಳು. ||

ಮಲ್ಲಿಗೆ ಮೊಲ್ಲೆಗ
ಳೆಲ್ಲಾ ಮೂಡುತ,
ತುಂಬಿಯೊ ಗಿಳಿಗಳೊ
ಎಲ್ಲಾ ಹಾಡುತ,

ತಾರೆಗಳೆಲ್ಲಾ
ದೂರದೆ ನೋಡುತ,
ಕುಣಿಯುವುವೀಕೆಯ
ಹೆಮ್ಮೆಯ ಕಾಣುತ. ||

ಹಿಂದಿಲ್ಲವೆ ಮುಂ
ದಿಲ್ಲವೆ ಈಕೆಗೆ ?
ಇಂತಹ ಸೊಬಗೆಯ
ಪಡೆಯುವ ಸೈಪಿಗೆ

ಆರೈ ಅಂತಹ
ಕರ್ಮವ ಗೈದರು ?
ಸತ್ತರು ಸಾಯದ
ಕೀರ್ತಿಯ ಕೊಯ್ದರು ||

ನೋವನು ಸೋಕದ
ಮೊಗದಾ ಮುದ್ರೆ
ಸಾವನು ತುಳಿಯುವ
ಕಾಮನ ಮುದ್ರೆ.

ನಡುಗುತ ನಡುಗುತ
ನಡೆಯಲಿ ಭದ್ರೆ !
ಇವಳೇ ಲೋಕದ
ಮೋಹದ ನಿದ್ರೆ ! ||

ಹುಳ್ಳಿಯ ಹುಡುಗಿ
ನಡೆಯಲಿ ನಡುಗಿ !
ತನ್ನೊಳೆ ನಾಚುತ
ನಗೆಯನು ಬಾಚುತ

ದುಗುಡವ ಸದೆಯುತ
ನರಕವನೊದೆಯುತ
ಎದೆಗೇ ನೋಟದಿ
ದಾರಿಯ ಮಾಡುತ. ||

ಲೋಭಿಯ ಹಣವೂ
ಈಕೆಯ ಗುಣವೂ
ಒಂದೇ ತೆರದವು
ಒಂದೇ ತರದವು.

ಎಲ್ಲಿಯೊ ಮಣ್ಣಿನೊ
ಳಾತನ ನಿಧಿಯು ;
ಮುಗುದನ ಬೆನ್ನಿನೊ
ಳೀಕೆಯ ವಿಧಿಯು. ||

ಈಕೆಯ ಭಾವದ
ಹಾವದ ಮೋಡಿಯು
ಮರುಳು ಕವಿಯ ಹಾ
ಡಿನ ಒಡನಾಡಿಯು.

ಎಲ್ಲರಿಗರಿಯದು,
ಎಲ್ಲರಿಗಾಗದು,
ಒಬ್ಬನ ಜನ್ಮಕೆ
ಹಬ್ಬವ ಗೈವುದು. ||

8. ಅದೊಂದು ತೆರ ಇದೊಂದು ತರ

ಅದೊಂದು ತೆರ !
ಇದೊಂದು ತರ !
ಆಕೆಯ ನಗೆ—
ಈಕೆಯ ಬಗೆ—
ಅವಳ ಮೋಡಿ—
ಇವಳ ಗಾಡಿ—
ಅದೊಂದು ತೆರ
ಇದೊಂದು ತರ. ||

ಕದಡಿದೆ ನಗೆ,
ಮುದುಡಿದೆ ಬಗೆ ;
ನಿಡುಸುಯ್ಲ್ಲಲಿ
ಹಿಡಿದಿದೆ ಹೊಗೆ ;
ಚೆಲುವಿನ ಬಗೆ
ಒಲವಿನ ಹಗೆ !
ಇವಳ ದುಗುಡ
ಎನಿತು ವಿಗಡ ? ||

ಸುಗ್ಗಿ ಹೂವ
ತೆರದೆ ನಗುವ
ಬಾಲೆಯಾಕೆ
ಬಿಂಕದ್ಧಾಕೆ ;
ಎನಿತು ಸರಸ ?
ಎನಿತು ಹಾಸ ?
ಕಾಡಿ ಬೇಡಿ
ಕುಣಿಪ ಮೋಸ ? ||

ಕೊಂಕುಗುರುಳ
ಸಂಕುಗೊರಳ
　　ಹುರುಡುಗಾರ್ತಿ
　　ಇವಳ ಕೀರ್ತಿ,
ಮಾಯೆಯಂತೆ
ಮುಸುಕು ಮುಸುಕು !
　　ದೈವದಂತೆ
　　ಕೊಂಕುಕೊಂಕು !　　||

ಆದಿಯಿಲ್ಲ,
ಅಂತವಿಲ್ಲ,
　　ತಿಳಿವೆನೆಂಬ
　　ಪಂತವಿಲ್ಲ !
ಅವಳ ಹೆಮ್ಮೆ
ಇಳೆಯನೊಮ್ಮೆ
　　ಆಳದಿಹುದೆ
　　ಬಾಳದಿಹುದೆ ?　　||

ಸೆಡವು ಬಹಳ !
ಒಲವು ವಿರಳ !
　　ಬೆಡಗು ಹೆಚ್ಚು
　　ಮುನಿಸು—ಕಿಚ್ಚು !
ಜ್ಯೇಷ್ಠೆಯೀಕೆ ;
ಆದರೇಕೆ ?
　　ಜ್ಯೇಷ್ಠಮಾಸ
　　ದನಿತೆ ಬೆಂಕೆ　　||

ಒಂದು ನಡೆಗೆ
ಹಲವು ಹಾವ !
    ಒಂದು ನುಡಿಗೆ
    ಹಲವು ಭಾವ !
ಆಶೆಗಳನು
ಭಾಷೆಗಳನು
    ತುಳಿದು ತೊಡೆದು
    ನಲಿವಳಿವಳು. ||

ಲಜ್ಜೆ ಮುಸುಕೆ
ಹಾವಸೆ ವೊಲು,
    ಒಳಗೆ ಕೆಳಗೆ
    ಹರಿವಳವಳು !
ಹಾವ ಭಾವ
ಹರ್ಷ ಕೋಪ
    ಎಲ್ಲ ಗುಟ್ಟು
    ನಮಗೆ ನಿಮಗೆ ! ||

ರೂಪದರ್ಥ
ತಿಳಿಯದೆನಗೆ ;
    ಓದಿ ಕಲಿತು
    ಬಾರದೆನಗೆ;
ನುಡಿವೆನೊಂದ—
ಇವರ ಚಂದ
    ಅದೊಂದು ತೆರ !
    ಇದೊಂದು ತರ ! ||

9. ನಮ್ಮ ಹಾಡು

ಅಂದು ಮಾವಿನ ತೋಟದೊಳಗಡೆ
ಚಿಗುರುಗಳು ಕುಣಿದಾಡೆ, ಕೆಳಗಡೆ—
ನಾನು ನೀನೂ ಸುಳಿಯದಿದ್ದರೆ
ಇಂದು ಕೂಡುತಲಿದ್ದೆವೇ ?

ಸುಗ್ಗಿ ತಂತ್ರವ ಹೂಡದಿದ್ದರೆ,
ಗಾಳಿ ಮಂತ್ರವ ಮಾಡದಿದ್ದರೆ,
ಶಾಂತಿಯಲಿ ತಿರುಗಾಡದಿದ್ದರೆ,
ನಾವು ಕೂಡುತಲಿದ್ದೆವೇ ?

ಕಾಮ ದೇವನು ಕಲಿಸದಿದ್ದರೆ,
ಬ್ರಹ್ಮ ದೇವನೆ ಕಲೆಸದಿದ್ದರೆ,
ಕಾಲವಿಂದಿಗೆ ದೂಡದಿದ್ದರೆ,
ನಾವು ಕೂಡುತಲಿದ್ದೆವೇ ?

ಎನ್ನ ಮನ ನಿನ್ನೆದೆಯೊಳಿಣಿಕುತ,
ನಿನ್ನ ಮನ ನನ್ನೆದೆಯ ಕೆಣಕುತ,
ಸಂಚು ಮಾಡದೆ ಸುಮ್ಮನಿದ್ದರೆ,
ನಾವು ಕೂಡುತಲಿದ್ದೆವೇ ?

ನಿನ್ನ ಕಣ್ಣೊಳಗಾಸೆ ಇದ್ದುದು,
ಎನ್ನ ಬಗೆಗೆ ಪಿಪಾಸೆ ಇದ್ದುದು ;
ಎಂತೊ ಈ ಪರಿಯಾಗದಿದ್ದರೆ,
ನಾವು ಕೂಡುತಲಿದ್ದೆವೇ ?

ಜನ್ಮಗಳು ಹಿಡಿದೆತ್ತದಿದ್ದರೆ,
ಕರ್ಮಗಳು ಬೆಂಬತ್ತದಿದ್ದರೆ,
ಹೀಗೆ ಹೇಗೋ ಆಗದಿದ್ದರೆ,
ಇಂತು ಕೂಡುತಲಿದ್ದೆವೇ ?

ನಾನು ನೀನೂ ನೋಡದಿದ್ದರೆ,
ನೋಟಗಳು ಒಡನಾಡದಿದ್ದರೆ,
ನಾವೆ ನಮ್ಮನು ಹುಡುಕದಿದ್ದರೆ,
ಇಂದು ಕೂಡುತಲಿದ್ದೆವೇ ?

ಎನ್ನ ಆತ್ಮವು ಹಾಡದಿದ್ದರೆ,
ಬಳಿಯೊಳದ ನೀ ಕೇಳದಿದ್ದರೆ,
ನಮ್ಮ ಹಾಡಿಂತಾಗುತಿದ್ದುದೆ?
ನಾವು ಕೂಡುತಲಿದ್ದೆವೇ ?

10. ದಯಿತೆ

ಕವಿತೆಯೆ! ದಯಿತೆಯೆ! ಎನ್ನೆದೆ ತಕ್ಕೆಯ
ಸೊಗದಲಿ ಸೇರಿರುವೆ.
ಬಾಳ್ವೆಯ ಬೇನೆಯ ಒಸಗೆಯ ನಡುವೇ
ಬಂದಿಹೆ ಬೆಂಬಿಡದೆ.

ಎಳವೆಯ ತೊಟ್ಟಿಲ ಹಾಡಿನ ಹೊನಲಲಿ
ತೇಲುತ ಬಂದಿರುವೆ.
ಪಡುವಣ ತೀರದ ಕನ್ನಡಗಡಲಿನ
ತೆರೆ ಸೇಸೆಯ ತಳಿವೆ.

ಅಡಕೆಯ ಹೊಂಬಾಳೆಯ ಸಿರಿದೋಟದ
ನೆಳಲಾಟಕೆ ಬಂದೆ.
ತೊದಲಿನ ನುಡಿಯಲಿ ಪದಗಳನೂರುತ
ಬಳಲಾಟವ ತಂದೆ.

ತಿಂಗಳ ಹೃದಯ ಪ್ರೇಮತರಂಗದಿ
ಓಕುಳಿಯಾಡಿದೆಯ?
ಹಿಂಗಾರಿನ ಹೊಸ ಹಸಲೆಗಳಿಂದಲೆ
ಸಿಂಗರ ಗೆಯ್ದಿಹೆಯ?

ಶರದದಿ ತೆಳ್ಳನೆ ತೇಲುವ ಮುಗಿಲಿನ
ನಿರಿಸೀರೆಯನುಟ್ಟೆ.
ಇರುಳಿನ ತಾರಗೆ ಮುತ್ತನು ಕೆತ್ತಿದ
ಜರಿ ಕುಪ್ಪಸವುಟ್ಟೆ.

ಪ್ರಾಸದ ಜಣಜಣರೆನ್ನುವ ಕಡಗವ
ಇಟ್ಟೇ ಬಹೆಯೊಮ್ಮೆ.
ಮುಗ್ಧ ವಿಲಾಸವೆ ಸಿಂಗರವಾಗಿರೆ
ಕೈಸೇರುವೆಯೊಮ್ಮೆ.

ಬಾನೊಳು ಹಿಸುಣಾಡುವ ಗಿರಿಶಿಖರ
ಧ್ಯಾನವ ನೀ ಕಲಿತೆ.
ಪಡುವಣ ಕನ್ನಡ ಸುಗ್ಗಿಯ ಹಸುರಿನ
ಮೌನದೆ ನೀ ಕಲೆತೆ.

ಜವ್ವನ ಮಾಡದ ಕನಸಿನ ಗೊಂಚಲ
ಕೊಯ್ದೇ ಮುಡಿಯಿಸುವೆ.
ಕನ್ನಡ ದೇಸಿಯ ಬೆಡಗನು ಹೊಂಚಿಸಿ
ಅವಿನಾಣವ ಮೆರೆವೆ.

ಬಾಳ್ವೆಯ ಮೆಟ್ಟಿಲನೇರುತ ಬಳಿಯೊಳೆ
ಎಲ್ಲಿಂದಲೊ ಬಂದೆ.
ಜಸವನು ಮರೆಯುವ ಮರವೆಯ ಹಸೆಯಲಿ
ಕೂಡಲು ನೀ ಬಂದೆ.

ಬೀಳ್ವೆವು ಕತ್ತಲೆ ಬಾನಿನೊಳೆಲ್ಲಿಯೊ
ಜಾರುವ ತಾರೆವೊಲು.
ಕವಿತೆಯೆ ! ನಾವೊಬ್ಬೊಬ್ಬರ ತಕ್ಕೆಯ
ಸೆರೆಯೊಳೆ ಬಾಳುವೆವು.

11. ಗರತಿ

ಎನ್ನಯ ಬಾ
ಳಿನ ಕೆಳದೀ !
ಕುಳಿತಿರು ಆ
ತ್ಮದ ಕೆಲದಿ ;
ಸಂಸಾರದ
ಈಕಳದಿ
ಇಬ್ಬರೆ ಸುತ್ತುವೆವು ;
ಇಬ್ಬರೆ ಸುಳಿಯುವೆವು.

ನೋವಿದ್ದರು,
ಸಾವಿದ್ದರು,
ಚಿಂತೆಗಳಾ
ಮೇವಿದ್ದರು,
ಹಂಬಲಿನಂ
ಬಲಿಯಿದ್ದರು,
ಒಟ್ಟಿಗೆ ಸವಿಯುವೆವು,
ಒಟ್ಟಿಗೆ ಸವೆಯುವೆವು.

ಏಕಾಂತವು
ಬೆದರಿಸುತಿದೆ !
ಲೋಕಾಂತವು
ಬೆಚ್ಚಿಸುತಿದೆ !
ನೀನಿರದೆ
ಹತ್ತಿರದೆ
ಪೌರುಷದೆತ್ತರದೆ
ಆತ್ಮದ ಬಿತ್ತರದೆ.

ನವಿಮ್ಮಾ ನಗು,
ನವಿಮ್ಮಾ ಅಳು,
ಎಂದೆಂದಿಗು
ಬಾಳುವುವೇ?
ಒಂದೊಂದರೊ
ಳೊಂದಿದೆ ಸೊಗ;
ಇಂದೇ ನಗಬೇಕು;
ಇಂದೇ ಅಳಬೇಕು.

ನಗಬೇಕೆಲೆ!
ಅಳಬೇಕೆಲೆ!
ಎನ್ನಾತ್ಮವ
ಹೊಗಬೇಕೆಲೆ!
ಬಯಕೆಯುಮುಗಿ
ಲೆಡೆಯೆಡೆಯಲಿ
ನೀನೆರಗಿರಬೇಕು
ನೀನೊರಗಿರಬೇಕು.

ಹೊಗಳಿಕೆಯೆಂ
ಬಿಡುಗೂಳೋ!
ತೆಗಳಿಕೆಯಾ
ಮಡಗೂಳೋ!
ನಮ್ಮಯ ಬಾ
ಯಿಗೆ ಬರುವುದೆ
ಮೃಷ್ಟಾನ್ನದ ತುತ್ತು.
ಎಂಬೆವು ಸಿರಿವೆತ್ತು.

ಕುತ್ತಗಳಾ
ವೊತ್ತಗಳಾ
ಹುತ್ತದಹಾ
ಗಿರುವೊಡಲಾ
ಸೆರೆಯೊಳಗೇ
ಮರೆಯೊಳಗೇ
ಬಾಳುವುದೀ ಜೀವ
ಹೂಳುವುದಾ ಸಾವ !

ಅಳಿದವರಾ
ಕಳಿದವರಾ
ಎಲುಬಿನ ರಾ
ಶಿಯನೊಟ್ಟುತ,
ಮಸಣದೊಳೇ
ಮನೆಗಟ್ಟುತ,
ನೆಲೆಮಾಡುವೆವಿಲ್ಲಿ;
ಕಳೆಗೂಡುವೆವಿಲ್ಲಿ.

ಕತ್ತಲೆಯೆ
ಬತ್ತಲೆಯೆ
ಕುಣಿಯುವುದೀ
ಗುಹೆಯೊಳಗೆ ;
ಮನವರಿಕೆಯು
ಕನವರಿಕೆಯು
ಮಿಂಚುವುದೊಮ್ಮೊಮ್ಮೆ
ಹೊಂಚುವುದೊಮ್ಮೊಮ್ಮೆ.

ಅಳಿವಿನ ಕಂ
ಗಳ ತಪ್ಪಿಸಿ,
ಕಳುವೆವು ಸವಿ
ಮುತ್ತುಗಳನು ;
ನಮ್ಮಾ ಲಾ
ಭದ ಲೋಭವೆ
ತಿರುಗಿಸುತಿಹುದೊಮ್ಮೆ,
ಮರುಗಿಸುತಿಹುದೊಮ್ಮೆ.

ದೈವವು ತಾ
ಳುವ ವರೆಗೂ,
ಒಡಲಿದು ಬಾ
ಳುವ ವರೆಗೂ,
ತುತ್ತುಗಳಿವೆ
ಮುತ್ತುಗಳಿವೆ.
ಸೊಗವಿದೆ, ದುಗುಡವಿದೆ,
ನಾನೀನೆಂಬುದಿದೆ !

ಹಿಂದಿಲ್ಲೈ !
ಮುಂದಿಲ್ಲೈ !
ಎಂದೆಂದಿಗು
ಬದುಕಿಲ್ಲೈ !
ನಿಂದಲ್ಲೇ
ನೊಂದಲ್ಲೇ.
ನಾವಗಲುವುದುಂಟು;
ನೋವಗಲುವುದುಂಟು.

ಶತಮಾನದ
ಜೀವಗಳೂ
ಶತಮಾನದ
ಭಾವಗಳೂ
ಗತಕಾಲವ
ತುಳಿದಾಚೆಗೆ
ನೆಗೆನೆಗೆದೇ ಬಹವು ;
ಚಿಗಿಚಿಗಿದೇ ಬಹವು.

ಬರುವುದದೆ
ಲ್ಲವು ಬರಲ್ಲೈ !
ಇಂದೀ ಪರಿ
ಮೆರೆದಿರಲ್ಲೈ !
ಅಳು ನಗು ಮು
ತ್ತೂ ತುತ್ತೂ
ಇರುವಂತೆಯೆ ಇರಲಿ,
ನಮಗೊಲವೊಂದಿರಲಿ !

12. ಪಂಡಿತನ ಪಯಣ

ಈ ಪರಿಯೋಡುವುದೆಲ್ಲಿಗೆ ಪಂಡಿತ ?
ನಿನ್ನಯ ಗುರಿಯಾವುದು ? ನುಡಿ, ಖಂಡಿತ !
ದೇಹವು ನೋಯದೆ ? ಜೀವವು ಬೇಯದೆ ?
ಆಸೆಯುದಿನ್ನೂ ನಂದದೆ ಕುಂದದೆ ?

ಹೇರಿದ ಹೊರೆಯಲಿ ಕೊರಳದೊ ಕುಸಿದಿದೆ ;
ಮೀರಿದ ದಾಹದಿ ಬೆವರಿದೊ ಬಸಿದಿದೆ ;
ಆರದ ಬಯಕೆಗಳೆಲ್ಲವನೊಟ್ಟುವೆ,
ಕಾಲವ ನಂಬುತ ಮೂಟೆಯ ಕಟ್ಟುವೆ.

ತಲೆಯೇರಿದ ಕಟ್ಟುಗಳೊಳಗೇನಿದೆ ?
ಹೆಗಲಲಿ ತೂಗುವ ಬುಟ್ಟಿಯೊಳೇನಿದೆ ?
ಆರಿಗು ಹೇಳದೆ ಆರಿಗು ತಿಳಿಸದೆ
ಏತಕೆ ಇಂತು ಪಲಾಯನ ಗೈಯುವೆ ?

ತತ್ವವೊ ಶಾಸ್ತ್ರವೊ ಏನಿದೆ ತಲೆಯಲಿ ?
ಧರ್ಮವೊ ಕರ್ಮವೊ ಏನಿದೆ ಭುಜದಲಿ ?
ಸಂಧಿ ಸಮಾಸದ ಭಾರವ ಹೊತ್ತು
ಬಂದುದೆ ನಿನಗೀ ತರದ ವಿಪತ್ತು ?

ಸಾಯುವ ಹುಟ್ಟುವ, ಹುಟ್ಟುತ ಸಾಯುವ
ಬಡಮಂದಿಗೆ ತಿಳಿವಿನ ತುತ್ತೀಯುವ
ಕರುಣೆಯು ಬೇಡವೆ ? ಎಲ್ಲವು ಗೂಢವೆ ?
ನೀನೆಮಗೀವುದು ಮಡಗೂಳಲ್ಲವೆ ?

ಆಗಲಿ ಪಂಡಿತ! ನಮ್ಮೆಯ ಪಂಥವು
ಬೇರಾಗಲಿ, ನಿನ್ನಯ ಆ ಶಪಥವು
ಹಳೆಗಾಲದ ಕನಸುಗಳನೇ ಮೇಯಲಿ!
ಹೊಸಗಾಲದ ನೆನಸುಗಳನು ಹಾಯಲಿ!

ಕಾಲವು ಬೆಂಬತ್ತುತಲೇ ಬರುವುದು,
ದಿನವಲ್ಲಲ್ಲಿಯೆ ತಲೆ ಮರಸುವುದು;
ನರೆಯೂ ಜರೆಯೂ ಬರಲಿದೆ ವೇಳೆ;
ಜರೆಯುವ ಕೆಲಸವ ಮುಗಿಸೈ ಮೊದಲೆ!

ನಿನ್ನಂದದಿ ಪುಣ್ಯವ ಕಟ್ಟಿದನೆ?
ನಿನ್ನಂದದಿ ವಿಧಿಯನು ಕುಟ್ಟಿದೆನೆ?
ಕರ್ಮದ ಕೆಸರಲಿ ಬಿದ್ದವ ನಾನು
ಧರ್ಮದ ಮಡಿಯನು ಹೊದ್ದವ ನೀನು.

ಜನಗಳು ಬೆಂಬತ್ತಲಿ ಹಿಂಜರಿಯಲಿ,
ನಿನಗೊಬ್ಬನಿಗಾವುದು ಭಯ ಪಥದಲಿ?
ಮುಗಿಯದ ಸಾಧನೆಯಡಸಿದೆ ನಿನ್ನನು;
ಆರೈ ಬರುವರು ಬೆದರಿಸೆ ನಿನ್ನನು?

ಇಂಗ್ರುಜಿಗಿಂಗ್ರುಜಿ ಸಕ್ಕದಗಿಕ್ಕದ
ಎಲ್ಲವ ಮೂಟೆಯ ಮಾಡಲು ಹೆಕ್ಕದ!
ಓಡೈ! ಹಾರೈ! ಹೇರೈ! ತಲೆಯಲಿ
ಅಡಗಿಸು ಸೇರಿಸು ನಿನ್ನಯ ನೆಲೆಯಲಿ.

ತರ್ಕದ ಸುರಗಿಯು ಕೈಯೊಳಗಿಲ್ಲವೆ ?
ವೇದಾಂತದ ಕೈದೀಪವದಿಲ್ಲವೆ ?
ನಂಬಿಕೆಯುಂಬಲಿ ದಾಹವ ಕಳೆಯದೆ ?
ಶ್ರದ್ಧೆಯು ಕಂಬಳಿ ಚಳಿಯನು ನೀಗದೆ ?

ಕಳ್ಳರೊ ಕಾಕರೊ ಆರೈ ಬರುವರು ?
ಕದ್ದರೆ ಆರೀ ಹೊರೆಯನು ಹೊರುವರು ?
ಶಾಪದ ಕೋಲನು ಜಳಪಿಸಲಾಗದೆ ?
ಆರೈ ಬದುಕುವರದರಾ ಹೊಡೆತದೆ ?

ಉಣ್ಣುತ ಕುಡಿಯುತ ದೈವವ ಸಾಕುತ
ಏಳುತ ಮಲಗುತ ಎಂತೋ ನೂಕುತ
ಕಾಲವ, ಕಳೆಯಲು ಬಾರದೆ ಜಾಣಗೆ ?
ಕರ್ಮದ ಬಂಧಗಳೇಕ್ಕೆ ನಿನಗೆ ?

ದುಡಿವರ ಗೈಮೆಯ ಹಳಿಯಲು ಬಹುದು ;
ಓದುವರೋದನು ತುಳಿಯಲು ಬಹುದು ;
ಕಲಿಯುಗವೆನ್ನುತ ನಿಂದಿಸಬಹುದು,
ಕೃತಯುಗಕೇ ಕೈಮುಗಿಯಲು ಬಹುದು.

ಇಂದಿನ ಜನಗಳ ಶಪಿಸಲು ಬಹುದು,
ಹಿಂದಿನ ದಿನಗಳ ಜಪಿಸಲು ಬಹುದು ;
ಎಲ್ಲರ ಜರೆಯುತದೃಷ್ಟವ ಕರೆಯುತ
ಹೋಗಲು ಬಹುದೊಬ್ಬನೆ ಮುಂದೊತ್ತುತ.

ಪಂಡಿತರಾದರು ಪಾಮರರಾದರು
ಒಂದೇ ಹೆಸರಿಗೆ ಸೋಲ್ವರು ಸಾವರು ;
ಸತ್ತರು ನಮ್ಮೀ ನೆನಪಿರಲೆಂಬರು,
ಜೀವವ ಬಿಡುವರು ಜಸವನು ಕೊಂಬರು.

ಓಡ್ಪೈ ಪಂಡಿತ ! ಓದಿಗೆ ಲೋಕದ
ಹಾದಿಯು ದೊರೆವುದೊ ? ಪರಿಕಿಸಿ ನೋಡದ
ದೂರದೆ ಕಾಂಬುದು ಕೀರ್ತಿಯು ಬೆಟ್ಟ,
ಅದನೇರ್ವುದು ಪಂಡಿತರಿಗು ಕಷ್ಟ.

ಅಡರಲು ಎದೆಯೊಂದೇ ಇರಬೇಕು;
ನೋವಿನೊಡನೆ ಜಗಳಾಡಲು ಬೇಕು ;
ಅಡಿತಪ್ಪಲು—ಆ ಬೆಟ್ಟದ ತಪ್ಪಲು
ಕೆಡಹವುದೆಲ್ಲಿಗೊ ? ಬಾರದು ಹೇಳಲು.

ಬುತ್ತಿಯೊ ಹೊರೆಯೋ ಕತ್ತಿಯೊ ಎಲ್ಲವು
ಏರುವ ಸಮಯದಿ ಹಿಂದೆಯೆ ಸೆಳೆವುವು ;
ಕೈಗೋಲ್ ಮುರಿವುದು, ಸೊಡರಾರುವುದು ;
ಪಂಡಿತರೋದನವಾರಿಗು ಕೇಳದು.

ಎಲ್ಲರ ನುಂಗುವ ಮರವೆಯು ಕಣಿವೆ
ಬಳಿಯೊಳೆ ಬೆದರಿಸುತಿರುವುದ ಕಾಣುವೆ.
ಪಂಡಿತರೆಲ್ಲರು ಪಾಮರರೆಲ್ಲರು
ಕಣ್ಮರೆಯಿಸಿ ಅಲ್ಲಿಯೆ ಅಡಗುವರು.

ಪೂರ್ವದೆ ಸಂಚಯಗೈದಾ ಕರ್ಮವು
ಕೈಬಿಡುವುದು ಮುಂದಣಕಿಸೆ ಸಾವು,
ಓದುಗಳಾವುವು ತತ್ವಗಳಾವುವು
ಕೈಹಿಡಿದೆತ್ತಲು ಬಾರವು ಬಾರವು.

ಮುಗಿಲನು ಮುಟ್ಟುವ ಗಳೆಗಳ ತುದಿಯಲಿ
ಹಾರುವ ಡೊಂಬನ ತೆರದಲಿ— ನೆಲದಲಿ
ನಿಲುಕದ ತತ್ವದ ತುದಿಯಲಿ ಸಾಯುವ
ನಿನಗಾವನು ಬಾಯಿಗೆ ನೀರೆರೆಯುವ ?

ಆರೋ ಕಾಡಿನ ನಾಡಿನ ಜನರು
ಎಂತೋ ಕಷ್ಟದಿ ಹಿಡಿದೆತ್ತುವರು.
ಉಸಿರಾಡದ ತನು ಕಂಡಳುಕುವರು
ಮಿತಿಯಿಂ ಕಂಬನಿಗಳ ತುಳುಕುವರು.

ಹೊರೆಗಳ ಸೆರೆಗಳ ಬಿಚ್ಚುವರಾಗಳೆ
ಹೊರತೆಗೆದೆಲ್ಲವ ಪರಿಕಿಪರಾಗಳೆ !
ಏನದ್ಭುತವೆಂದಚ್ಚರಿಗೊಂಬರು;
ಹುಚ್ಚೇ ಅಡಸಿದುದೀತನಿಗೆಂಬರು.

ಪುಸ್ತಕ ರಾಶಿಯ ಹೊರ ಚೆಲ್ಲುವರು ;
ಅದರಿಂದಲೆ ಕಾಷ್ಠವ ರಚಿಸುವರು ;
ದಾರಿಯು ತಪ್ಪಿದ ಪಂಡಿತನೆಂಬರು
ಹೆಸರೇನೋ ತಿಳಿಯೆವು ನಾವೆಂಬರು.

ಸತ್ತವನೀತನ ಸೊತ್ತನು ಮುಟ್ಟೆವು,
ಕೊನೆಯಾ ಸೇವೆಯ ಮಾಡದೆ ಕದಲೆವು,
ಎಂದೊರೆದೇ ಬೆಂಕಿಯನೊಟ್ಟುವರು
ಕಾಷ್ಠದ ಹೆಣವನು ಬೂದಿಯ ಗೈವರು.

ಮಿತವಾಗಿಯೆ ಕಂಬನಿಯನು ಸುರಿವರು;
ಸಂಕ್ಷೇಪದ ಸಂಸ್ಕಾರವಗೈವರು;
ಪುಣ್ಯವ ಗಳಿಸಿದೆವೆನ್ನುತ ಹಿಗ್ಗುತ
ನಡೆವರು ತಮ್ಮಯ ದಾರಿಯ ಹಿಡಿಯುತ.

*   *   *

ಬದುಕಿನೊಳಿದುವೇ ಗೆತಿಯೆಲೆ ಪಂಡಿತ !
ಒದೆದೋಡುವರೈ ತಿಳಿವನು ಖಂಡಿತ.
ಪಂಡಿತರಾದರು ಪಾಮರರಾದರು
ಸಾವಿನೊಳೊಂದಾಗಿಯೆ ಸೇರುವರು.

13. ಅಂತಹ ದಿನ

ಅಂತಹ ದಿನ — ಸಂತೆಯ ದಿನ
ಚಿಂತೆಯ ದಿನ ಬರಬೇಕೇ ?
ಕಾಳಿನ ದಿನ ಕೂಳಿನ ದಿನ
ಗೋಳಿನ ದಿನ ಬರಬೇಕೇ ?

ಒಳಗೊಳಗೇ ಧಗಧಗಿಸುವ
ಅಳಿಯಾಸೆಯನುರಿಸುತ್ತ
ಬೇಳುವ, ಬಾಳುವ, ಸಾವಿಗೆ
ಬೀಳುವ ದಿನ ಬರಬೇಕೇ ?

ಒಂದಾದರು ಒಳ್ನುಡಿಯನು
ಆಡದ ದಿನ ಬರಬೇಕೇ ?
ಒಂದಾದರು ನಲ್ವಾಡನು
ಕೇಳದ ದಿನವಿರಬೇಕೇ ?

ಕವಿತಾವೇಶದ ಮುದದಲಿ
ಕುಣಿಯದ ದಿನ ಬರಬೇಕೇ ?
ಸವೆಸವೆದೇ ನವೆನವೆದೇ
ತವುವಾ ದಿನವಿರಬೇಕೇ ?

ತನ್ನವರಿಗೆ ತನ್ನವಳಿಗೆ
ಮರುಗದ ದಿನ ಬರಬೇಕೇ ?
ತನ್ನಾತ್ಮಕೆ ತನ್ನೊಡೆಯನ
ಕರೆಯದ ದಿನವಿರಬೇಕೇ ?

ದುಡಿದುಡಿಯುುತ ದಣಿದಣಿಯುುತ
ಸೆಡೆಸೆಡೆಯುುತ ಕೆಡೆಯುುತ್ತ,
ಒಡಲಿನ ಮುುಡಿಪನೆ ಪೂಜಿಪ
ಕೆಡುದಿನವೊಂದಿರ ಬೇಕೇ ?

ಹೋರುವ ಹಾರುವ ದುಗುಡದೆ
ಜಾರುವ ದಿನ ಬರಬೇಕೇ ?
ಹಿಡಿ ಕೂಳಿಗೆ ಇಡಿ ಜೀವವ
ಕೊಡುವಾ ದಿನವಿರಬೇಕೇ ?

ಇದ್ದರು ಬಲವಿದ್ದರು ಚಲ
ಬರಡಾಗುವ ದಿನ ಬೇಕೇ ?
ಇದ್ದರು ಇಲ್ಲದ ತೆರದಲಿ
ಸದ್ದಡಗುವ ದಿನ ಬೇಕೇ ?

14. ಬರುವೆ

ನೆಗೆನೆಗೆದು
ಚಿಗಿಚಿಗಿದು
ಬೆನ್ನಟ್ಟಿ ಬರುವೆ !
ಮೊಗೆಮೊಗೆದು
ಬಯಕೆಗಳ,
ಬೆಂಬತ್ತಿ ಬರುವೆ !

ಕರಕರೆಯು
ವೇದನೆಯು
ಕೊರೆಕೊರೆದು ಬರುವೆ !
ಕೊನೆಯಿರದ
ಸಾಧನೆಯು
ಬದಿಗೊತ್ತಿ ಬರುವೆ !

ಕಾಲಗಳ
ಕೀಲುಗಳ
ಕಳಚುತ್ತ ಬರುವೆ !
ಯೋಗಗಳ
ಯಾಗಗಳ
ತುಳಿಯುತ್ತೆ ಬರುವೆ !

ನಿನ್ನೆಗಳ
ಹಿಂದೊತ್ತಿ
ಇಂದಿನಲಿ ಬರುವೆ !
ಬರುವ ಸಮ
ಯದ ಬೆನ್ನ
ಮೇಲೇರಿ ಬರುವೆ !

ಕನಸಿನಲಿ
ನಿದ್ದೆಯಲಿ
ಸದ್ದಡಗಿ ಬರುವೆ !
ನೆನಸಿನಲಿ
ಸತ್ಯದಲಿ
ಎದ್ದೋಡಿ ಬರುವೆ !

ಎಲುಬುಗಳ
ಕೋಲಾಟ
ಆಡುತಲಿ ಬರುವೆ !
ನೆತ್ತರಲಿ
ಮಿಾಯುತ್ತೆ
ಹತ್ತಿರಕೆ ಬರುವೆ !

ಒಡಲುಗಳ
ಎಡೆಯಲ್ಲಿ
ತಲೆಮರಸಿ ಬರುವೆ !
ಎದೆಯೆದೆಯ
ಬದಿಯಲ್ಲಿ
ಹುದುಹುದುಗಿ ಬರುವೆ !

ಬಾಳ್ವೆಯುಲಿ
ಸುಳಿಯುತ್ತೆ
ಬಳಲುತ್ತೆ ಬರುವೆ !
ಮಸಣದಲಿ
ಮಲಗುತ್ತ
ವಿಶ್ರಮಿಸಿ ಬರುವೆ !

ಎಲ್ಲೆಲ್ಲಿ
ಓಡಿದರು
ಅಲ್ಲಲ್ಲೆ ಇರುವೆ !
ಎನಿತೆನಿತು
ಕಾಡಿದರು
ಮುದ್ದಾಡಿ ಬರುವೆ !

ನೀನಗಲ
ಲುಂಟೇನೊ ?
ಆನೆ ಅಗಲುವೆನು.
ಜೀವ ಜಗ
ತಿಯ ಮೇಲೆ
ಕುಳಿತಿರುವೆ ನೀನು !

ಹುರುಡೆಲ್ಲ
ಹುಳುಕೆಲ್ಲ
ಎನ್ನೊಳೇ ಇಹುದು.
ಆನೆ ನಿ
ನ್ನಯ ಬಳಿಯು
ಬಿಟ್ಟೋಡುತಿಹುದು !

15. ಇಹ—ಪರ

ಅಲ್ಲೊಂದು ಲೋಕವಿಹು
ದಿಲ್ಲೊಂದು ಲೋಕವಿದೆ.
ಅಲ್ಲೊಬ್ಬ ಸಾಕ್ಷಿ ! ಇ
ಲ್ಲಿದೆ ಮನಸ್ಸಾಕ್ಷಿ.

ಅಲ್ಲಿ ತಾರೆಯ ಹೊಳಪು—
ಇಲ್ಲಿ ನೀರರ ಸೊಂಪು !
ಭೇದವೇನಿದೆ ಹಿರಿದು
ಕಿರಿದೆಂಬುದಿನ್ನು ?

ಅಲ್ಲಿ ಕಾಣದನಂತ
ಸೌಂದರ್ಯದಾ ಕನಸು !
ಇಲ್ಲಿ ತೋರುವ ಸೊಬಗು
ನಿಜದ ನೆನಪು !

ಅಲ್ಲಿ ಸತ್ಯದ ಬೇರು
ಗೂಢತೆಯೊಳಡಗಿಹುದು !
ಇಲ್ಲಿ ಸೃಷ್ಟಿಯ ಚಿಗುರು
ಹರಡಿರುವುದು !

ಅಲ್ಲಿ ಪರಸುಖ—ಪರರ
ಸುಖ, ಯೋಗಿ ಮಾನಸಕೆ
ನಿಲುಕುವುದೊ ನಿಲುಕದೋ
ಎಂಬ ತತ್ವ !

ಇಲ್ಲಿರುವ ಸುಖ-ಬಾಳ
ಬಲ್ಲವರಿಗಿಹ ಸೌಖ್ಯ ;
ಎಲ್ಲರಿಗು ಎಂದೆಂದು
ದೊರಕ ಬಹುದು.

ಧರಣಿಗಿಹ ಕುಂದೇನು ?
ಪರದೊಳಿಹ ಕಳೆಯೇನು ?
ಸಾಯುತ್ತ ಬದುಕುತ್ತ
ಬೇಸತ್ತೆವು.

ಆಸೆಯಲಿ ನೇತಾಡಿ,
ದುಗುಡದಲಿ ಜೋತಾಡಿ,
ದೊರೆಯದಿಹುದಾವುದಕೊ
ಹಂಬಲಿಪೆವು.

ಒಂದೆ ಬಗೆಯೊಂದೆನಗೆ !
ಒಂದೆ ಮನಸಿನ ಬೇಗೆ !
ಅನುಭವದ ಅಚ್ಚೊಂದೆ
ಒಡವೆಯೊಂದೆ !

ಓದೋದಿ ಕಲಿಕಲಿತು
ಮುಗಿಯದಿಲ್ಲಿಯ ಹಾಡು,
ಗೆಯ್ಮೆಯಲಿ ಬೇಸತ್ತು
ಬಾಯ್ಬಿಡುವೆವು.

ಅಯ್ಯಯ್ಯೊ ಹಳಸಿತೇ
ಪರಮಾತ್ಮನೀ ಪಾಕ ?
ಈ ಸೃಷ್ಟಿ ಈ ಬೆಡಗು,
ಶಾಂತಿ, ಕಾಂತಿ !

ದಿನದಿನಕೆ ಹೊಸದಪ್ಪ
ಈ ಸೃಷ್ಟಿ ಬೇಡೆನಲು,
ಆರ ಮಾಟದ ಸೃಷ್ಟಿ
ಮೆಚ್ಚಲಿಹುದು ?

16. ತೊಟ್ಟಿಲು

ಆರಯ್ಯ ಆರಯ್ಯ ಎನ್ನತೂಗುವರಿಂತು ?
ಕಾಣದೀ ತೊಟ್ಟಿಲೊಳಗಿಟ್ಟು ತೊನೆಯುವರಿಂತು ?
'ಏತಕೀಪರಿ ಬವಣೆ ?' ಎಂದಾನು ಕೇಳುವೆನು ;
'ಎಲ್ಲರಿಗು ಇದೆ ಹಾಡು' ಎಂಬುದೇ ಮರು ಮಾತು !
ಧರ್ಮದಾ ಕೈಯೊಂದು ಕರ್ಮದಾ ಕೈಯೊಂದು
ಅತ್ತಿತ್ತ ದೂಡುವುವು ; ಎತ್ತೆತ್ತಲೋಡುವುವು!
ಆರವೀ ಕೈಗಳೆಲೆ ! ಏತಕಿಂತಹ ಮಾಟ ?
ಹೇಳಬಲ್ಲವರುಂಟೆ ? ಎಂದು ಮುಗಿವುದು ಕಾಟ ?
ಗ್ರಂಥಪರ್ವತವೆ ಮೇಲೆದ್ದು ನಿಂತಿದೆ ನಭಕೆ!
ತರ್ಕಕರ್ಕಶ ತಪ್ತಧಾತುರಸಗಳ ಚೆಲ್ಲಿ,
ಜೀವಿ ಜೀವಿಯು ಸುಟ್ಟು ಬೂದಿ ಮಾಡುವುದಿಲ್ಲಿ ;
ಇದರ ಹೊಗೆ ಬೆಂಕೆಯುಲಿ ಕಂಬನಿಯು ಮಿಡಿವುದೇ
ತೂಗುವುದೆ ತೊನೆವುದೇ ನಮ್ಮ ಬಾಳ್ವೆಯು ಕಡೆಯು !
ಆತಡಿಯೊಳಜ್ಞಾನ ! ಜೀವಗಳನರೆಗಳಿಗೆ
ತೇಲಿಸುವ ಮುಳುಗಿಸುವ ನಿಬಿಡಾಂಧಕಾರವದು ;
ಈ ತಡಿಯೊಳಜ್ಞೇಯುವೆನಿಸುವಾವುದೊ ಬದುಕು
ತಿಳಿವುಗಣ್ಣುಗಳ ಕೋರೈಸುವಾವುದೊ ಬೆಳಕು—
ನಡುವೆ ಕೂಗುವೆವು—ತೂಗುವ ಕೈಯು ಕಾಣದೇ
ಏರುವೆವು ಏರುವೆವು ಬವಣೆಯುಲಿ ಹಾರುವೆವು;

ದಣಿಯುವೆವು, ದುಡಿಯುವೆವು, ನಿದ್ದಿಸುವೆವೇಳುವೆವು,
ಹೋರುವೆವು, ಚೀರುವೆವು, ನಮ್ಮೊಡವೆ ನಮ್ಮಾಳು
ನಮ್ಮೂರು ನಮ್ಮರಸು ನಮ್ಮ ದೇವರ ಬಾಳು
ಎಂದಾವುದೋ ನಮಗೆ ತಿಳಿಯದುದ ಮುಂದೊಡ್ಡಿ,
ಈ ಬವಣೆಯೊಳೆ ಸರಸವಾಡುವೆವು ಛಲವೊಡ್ಡಿ.
ಮಡಿದವರು ಬಾಳುವರು, ಬಾಳುವರು ಮಡಿಯುವರು
ನಮ್ಮ ತೊಟ್ಟಿಲು ಸತತ ತೂಗುವುದು ತೊನೆಯುವುದು.

17. ಶಾಸನ

ಶಾಸನವ ಬರೆ ದೊರೆಯೆ !
ಶಾಸನವ ನೀನೆ ಬರೆ ;
ದಾಸನಿವನೆಂದೆನುತ
ಎನ್ನ ಕರೆವಂತೆ ಬರೆ !
ತುಂಟನೋ! ಬಂಟನೋ !
ಕುಂಟನೋ! ಕುರುಡನೋ !
ಯೋಗಿಯೋ ! ಭೋಗಿಯೋ!
ಹೇಗು ದಯವಿಟ್ಟು ಬರೆ.

ಚಿಗುರುಗಳ ತೋರಣದಿ,
ಮುಗುಳುಗಳ ಲಂಬಣದಿ,
ಹೋದ ಕಾಲದ ಬೆಡಗ
ಬರುವ ಕಾಲದ ಸೊಬಗ
ಹಸರಿಸುತ ಸಿರಿಸುಗ್ಗಿ
ಕಪ್ಪಗಳ ಕೊಳ್ಳುತಿರೆ,
'ಎನ್ನ ಪೂಜೆಯು ಮುಗುಳು'
ಎಂದೆನ್ನ ನೀನು ಕರೆ !

ಎಲುಬುಗಳ ರಾಶಿಗಳು,
ತಲೆಯೋಡು ಗೂಡುಗಳು,
ಅಳಿದೂರು ಕೇರಿಗಳು,
ಮುರಿದ ಬಲ್ಗೋಟೆಗಳು,

ಅಸ್ಥಿಪಂಜರವಿದನು
ಮುತ್ತಿಮರಸಿದರೇನು ?
ಒತ್ತಿ ಬರೆ — ' ಇವನೆನ್ನ
ಹತ್ತಿರವೆ ಬಾಳಿದನು.'

ಶಕಗಳೆನಿತೂ ಬರಲಿ !
ಭೂಗರ್ಭಗಳ ಸೀಳಿ,
ಹೊಸ ಬಜ್ಜೆ ಹೊಸ ಓದು
ಬೆಂಬತ್ತಿ ಬರೆ ಹಾದು,
ಆರ ರಾಜ್ಯವೆ ಬರಲಿ !
ಶಾಸನವಿದೊಂದಿರಲಿ:—
" ಎನ್ನವನ ದೇಹವಿದು
ಎನ್ನೊಡವೆಯಾಗಿಹುದು."

18. ದೋಣಿ ಹಾಡು

ಹಾಡಿರಿ, ಗೆಳೆಯರೆ ಹಾಡಿರಿ !
ದೂಡಿರಿ, ದೋಣಿಯ ದೂಡಿರಿ !
ಎಂತಾದರು ದಡ ಸೇರುವ !
ಪಂತವ ಹಿಡಿಯುವ ಹಾರುವ !

ಹಿಗ್ಗಿರಿ, ಗೆಳೆಯರೆ ಹಿಗ್ಗಿರಿ !
ನೆಗ್ಗುವ ತೆರೆಯಲಿ ನುಗ್ಗಿರಿ !
ಹುಟ್ಟನು ಹಿಡಿಯುವ ನೂಕುವ !
ಗುಟ್ಟನು ತಿಳಿಯುವ ಬದುಕುವ !

ಒತ್ತಿರಿ, ಗೆಳೆಯರೆ ಹತ್ತಿರಿ !
ತೆರೆಗಳ ನೆತ್ತಿಯ ನೊತ್ತಿರಿ !
ಮುರಿಯುವ ಮಡುವಿನ ಕೋಟೆಯ
ಹರಿದಾಚೆಯ ದಡ ದಾಟುವ !

ಸುಳಿ ಸುಳಿವುದು ಸೆಳವೀ ಕಡೆ !
ಗುಳುಗುಳಿಪುದು ಹೊನಲಾ ಕಡೆ !
ಹರಿಗೋಲಿನ ಸರಿದಾರಿಯ
ಪರಿಕಿಸಿ ದೂಡುವ ದೋಣಿಯ !

ಮುಗಿಲದೊ ಮುತ್ತಿದೆ ಬಾನನು !
ಹೊಗುವನು ನೇಸರು ಕಡಲನು!
ಸಂಜೆಯು ನಿಟ್ಟುಸಿರೂದಿತು.
ಮಂಜಿನ ಕಂಬನಿ ಸುರಿಯಿತು.

ಉಳಿದರು ಉಳಿಯಲಿ ದಡದಲಿ !
ಅಳುಕುವರುಳಿಯಲಿ ಬುಡದಲಿ !
ಅಳುವುದು ನಗುವುದು ಆಕಡೆ !
ಹೊಳೆಯಾಚೆಯು ತಡಿ ಕಾಂಬೆಡೆ !

ಹೋರಿರಿ, ಗೆಳೆಯರೆ ಹೋರಿರಿ !
ಹಾರುವ ತೆರೆಯಲಿ ಹಾರಿರಿ !
ಹುಟ್ಟಿರೆ ಬಲವನು ತೋರುವ
ಪಟ್ಟಿರಿ ಧೈರ್ಯವ ಹಾರುವ !

ಹಿಡಿಯಿರಿ ಜೀವವ ಕೈಯಲಿ,
ಕೆಡುಕೇನೊ ಇದೆ ನದಿಯಲಿ!
ಹೊಳೆಯಾ ಸೆಳವಿನ ರಭಸವು
ಸೆಳೆವುದು ನಮ್ಮನು ಸತತವು.

ಭಕ್ತಿಯು ಬಿಡದೇ ಹಾಡುವ;
ಯುಕ್ತಿಯು ಹೂಡುವ ನೋಡುವ;
ಶಕ್ತಿಯಿರಲು ಹೋರಾಡುವ
ಮುಕ್ತಿಯು ನೆನೆಪನು ಪಡೆಯುವ!

ಹುಟ್ಟನು ದೂಡುತ ದೂಡುತ,
ಕೆಟ್ಟರೆ ಕೈಬಲ, ಕೆಡೆಯುತ,
ತೆರೆಗಳ ತೊಟ್ಟಿಲನೇರುತ,
ಒರಗುವೆವಲ್ಲಿಯೆ ತೂಗುತ.

ನದಿಯಾ ಕಡಲಿನ ಸಂಗಮು !
ಕಾಣದೆ ಇದು ಹೃದಯುಂಗಮು !
ಹೊಡೆಯುವ ಮುರಿಯುವ ಮೊರೆಯುವ
ಕಡಲಿನ ಸರಿಸಕೆ ನಿಲ್ಲುವ !

ಹಿಂದಕೆ ಮುಂದಕೆ ತಿರುಗದೆ,
ತಂದೆಗೆ ತಾಯಿಗೆ ಮರುಗದೆ,
ಭವದನುಭವದಿಂದಾಚೆಗೆ
ಸವೆಯುವ ಬದುಕಿಂದಾಚೆಗೆ

ಕಡಲಿನ ರಾಜನ ಸೀಮೆಗೆ
ನಡೆವೆವು ನಡೆವೆವು ನೆಟ್ಟಗೆ !
ತೆರೆಯು ಸವಾರಿಯ ಮಾಡುತ
ಮೆರೆವೆವು ನಮ್ಮನೆ ಮರೆಯುತ.

ಕಡಲ ತರಂಗದ ತಾಂಡವ
ಒಡೆಯುದಿಹುದೆ ಬ್ರಹ್ಮಾಂಡವ ?
ಒಡೆಯುಲಿರುವ ಬ್ರಹ್ಮಾಂಡದ
ಓಡಿಂದೋಡವ ಮಾಡುವ !

ಗೆಳೆಯರೆ ! ಹೂಡಿರಿ ಪಂತವ !
ಅಳಿವನು ಸುಮ್ಮನೆ ನಿಂತವ !
ಬಲವಿರೆ ದೋಣಿಯ ದೂಡುವ !
ಗೆಲವೋ ಸೋಲೋ ನೋಡುವ !

ಹಾಡಿರಿ ! ಗೆಳೆಯರೆ ಹಾಡಿರಿ !
ದೂಡಿರಿ, ದೋಣಿಯ ದೂಡಿರಿ !
ನದಿಯೋ ಕನಲಿದೆ ಹೊನಲಿದೆ !
ಇದೆ ಗತಿ ಹುಟ್ಟನು ಹೊಡೆವುದೆ !

19. ಮನೆ ದೇವರು

ಎನ್ನ ಬಳಿಯೆ ಕುಳಿತಿರಯ್ಯ
ಎದೆಯ ಬಳಿಯೆ ಕುಳಿತಿರು !
ಆತ್ಮವಾಣಿ ಕೇಳುವನಿತು
ಹತ್ತಿರ ದೊಳೆ ಕುಳಿತಿರು!

ದುಡಿದು ದುಡಿದು ಸುತ್ತುವನಿತು
ಗೈಮೆಗಳನು ಕರುಣಿಸು.
ಹತ್ತಿರದೊಳೆ ನಿಂತುನಿಂತು
ಕರುಣೆಯೊಂದ ಸುರಿಯಿಸು.

ಭಕ್ತಿಶೂನ್ಯ ಹೃದಯಭೂಮಿ !
ಎಂತೊ ಬೆದೆಯ ಮಾಡಿಸು;
ಮಿಂಚಿನಿಂದ ಸಿಡಿಲಿನಿಂದ
ಎಂತೊ ಹೂಡಿ ಬಿತ್ತಿಸು.

ಕುಂಟ ನಾನು, ಕುರುಡ ನಾನು,
ಬಾಳ್ವೆದಾರಿ ಕಡಿದಿದೆ.
ಬೆಟ್ಟಗಟ್ಟ ಹಳ್ಳಕೊಳ್ಳ
ನಡೆಯನಿಲ್ಲಿ ತಡೆದಿದೆ.

ಮಸಣದೊಡೆಯ ನಂದಿಕೇಶ !
ಎನ್ನ ಮನೆಯ ದೈವವೇ !
ಬಾಳ್ವೆಯೊಡೆಯನಾಗಿ ಬಂದು
ವಾಸಿಸೆನ್ನ ಜೀವವೇ !

ಒಡಲು ರಜತಗಿರಿಯ ಹಾಗೆ
ಕೆಡೆವುದಯ್ಯ ಕೆಡೆವುದು.
ರೋಮರಾಜಿ ವಿಜಯಕೇತು
ನಿನ್ನಜಸವ ನುಡಿವುದು.

ಚಲದಿ ಮಲೆದು ಹಾಯ್ದು ಹಣಿದು
ಗುಟುರುಗುಟ್ಟಿ ಬಾಳ್ವುದು !
ಮಲೆದು ಕೆಲೆವ ಮದದಗೂಳಿ
ಇದುವೆ ನಂದಿಯಪ್ಪುದು.

ವ್ಯೋಮಕೇಶ ! ರುದ್ರವೇಷ !
ರುಂಡಮಾಲ ! ಬಾರೆಲ !
ಮನೆಯ ದೈವ ಮನದ ದೈವ
ಆತ್ಮದೆಡೆಗೆ ಸಾರೆಲ !

ಜೀವವಿದ್ದರೇನು ದೇವ ?
ಒಡಲು ಮಸಣವಲ್ಲವೆ ?
ಅಳಲಕೊಳ್ಳಿ ಉರಿಯಲಿಲ್ಲಿ
ಇನ್ನು ಬೇರೆ ಮಸಣವೆ ?

ಅಯ್ಯೊ ಉರಿಯ ಬೆಂಕಿಕೊಳ್ಳಿ
ಕನಲುತಿಹುದು—ನಂದದು ;
ಆಸೆಯೊಡಲ ಸುಟ್ಟು ಸುಟ್ಟು
ಬೂದಿಮಾಡಿ ಕುಣಿವುದು.

ಇರುವುದೆಲ್ಲ ಸುಡುವುದಲ್ಲ !
ಎಲುಬುಗಳನೆ ಒಟ್ಟುವೆ.
ಗುಡಿಯ ಮಾಡಿ ಪೂಜೆ ಮಾಡಿ
ಕುಣಿವೆ ತಾಳಗುಟ್ಟುವೆ.

ಕಂಬನಿಗಳು ದಾರಿಗಳನು
ತೊಳೆದು ಹೊಲೆಯ ಕಳೆದಿವೆ.
ಸುಡುವ ಕಾಡ ಗುಡಿಯ ಕಡೆಗೆ
ನಿನ್ನ ಕರೆಯ ಬರುತಿವೆ.

ಮಸಣದೊಡೆಯ ! ನಂದಿಕೇಶ !
ರುಂಡವೊಂದೆ ಸಾಲದೆ ?
ಹಲವು ಜನ್ಮಕಿಹುದು ಕರ್ಮ ;
ರುಂಡ ಮಾಲೆ ದೊರೆಯದೆ ?

20. ಬೇಕು

ಕಬ್ಬಗಳು ನಾಲ್ಕಾರ ಬರೆದು ಹಿಗ್ಗಿರಬೇಕು ;
ಒಬ್ಬಳೇ ಎದೆಯೊಡತಿ ಬಳಿಯೆ ನಿಂತಿರಬೇಕು ;
ತಾರಗೆಯು ತುರುಬಿನಲಿ ತುರುಕುತ್ತ ದೆಸೆವೆಣ್ಣು
ದೂರದೂರಕೆ ಸನ್ನೆಮಾಡಿ ಕರೆಯುಲು ಬೇಕು ;

ಬರುವ ಕಾಲದ ಬಾಳ್ವೆ ಮುಗುಳೆಸಳ ನರುಗಂಪು
ಅರಿಕೆಯನು ತಟ್ಟಿ ಕುಣಿಕುಣಿಸುತ್ತಲಿರಬೇಕು ;
ಹಿಂದಿನಾ ಕಾಲದಾಚೆಯು ದಡದ ನೆನಹುಗಳು
ಮುಂದು ಮುಂದಕೆ ಮನವ ತೇಲಿಸುತ್ತಿರಬೇಕು ;

ಎನಿತು ಸುಗ್ಗಿಯು ಹೆರುವ ಪುಣ್ಯವಿಹುದೀ ಧರೆಗೆ
ಅನಿತು ಕಲ್ಪನೆಯೊಳಗೆ ತುಂಬಿ ತುಳುಕಿರಬೇಕು ;
ಕಾಲದಾ ಹೆಗಲೇರಿ ಬೀಳುತ್ತೆ ಹಾರುತ್ತೆ,
ಜೀವನದ ಜಯಕಾರ ಘೋಷವನು ಮಾಡುತ್ತೆ,

ಆಕಾಶದಿಂದತ್ತ ಭೂಗೋಲದಿಂದತ್ತ—
ನರಕದಿಂದತ್ತತ್ತ—ನಾಕದಿಂದತ್ತತ್ತ—
ಬ್ರಹ್ಮಾಂಡ ಕೋಟಿಗಳ ಕೋಟಿಯಿಂದತ್ತತ್ತ—
ಸೃಷ್ಟಿಗಳ ವಿಲಯಗಳವಲಯದಿಂದತ್ತತ್ತ—

ಎಲ್ಲೆಲ್ಲಿಯೋ ಹಾರಿ, ಎಲ್ಲೆಲ್ಲಿಯೋ ತೂರಿ,
ಎಲ್ಲೆಲ್ಲಿಯೋ ಜೀವವೆಂತೊ ಅಡಗಿರಬೇಕು ;
ದೇವರಿಲ್ಲದ ದೇಗುಲದ ತೆರದೊಳೀ ಒಡಲು
ಕಾವವರ ಕೈಸೆರೆಗೆ ಕೆಡೆದು ಬಿದ್ದಿರಬೇಕು ;

ಅಳುವವರು ಅಳಬೇಕು; ನಗುವವರು ನಗಬೇಕು;
ನೆರೆಯುವರು ನೆರೆಯೊಳೇ ನಿಂತು ನೋಡಲು ಬೇಕು;
ತನ್ನದೆನ್ನುವುದೆಲ್ಲ ಬೂದಿಯಾಗಿರಬೇಕು;
ಶೂನ್ಯಲೋಕದೊಳು ನೆನಪೊಂದೆ ಮಿಂಚಲು ಬೇಕು;
ಹೊಗಳುವರು ತೆಗಳುವರು ಎಲ್ಲರುಳಿದಿರಬೇಕು;
ಜಗದಿಂದಲೊಬ್ಬನೇ ಮುಂದೊತ್ತುತಿರಬೇಕು!

---

21. ಸಸಿ

ಬಿದ್ದಲ್ಲಿಯೆ ಮೊಳೆಯುತಲಿದೆ,
ಎದ್ದಲ್ಲಿಯೆ ಕೆಡೆಯುತಲಿದೆ,
ಬೆಳೆದಲ್ಲಿಯೆ ಅಳಿಯುತಲ್ಲಿದೆ,
ಬಾಳ್ವೆಯ ಸಸಿಯೆಂತೊ !

ಸೊಗದಲಿ ಚಿಗುರೊಡೆಯುತಲಿದೆ,
ಆಸೆಗಳಲಿ ಹೂ ಬಿಡುತಿದೆ,
ಒಲ್ಮೆಯ ಫಲವನು ಕೊಡುತಿದೆ,
ಬಾಳ್ವೆಯ ಸಸಿಯೆಂತೊ !

ಮರುಭೂಮಿಯು ಮಳಲಾದರು,
ಉರ್ವರೆಯೂ ಹಸುರಾದರು,
ಎಲ್ಲೆಲ್ಲಿಯು ಕವಲೊಡೆವುದು
ಬಾಳ್ವೆಯ ಸಸಿಯೆಂತೊ !

ಹರೆಯುದ ರೆಂಬೆಯು ಬಿಡುತಿದೆ,
ದುಗುಡದ ತೊಗಲನು ತೊಡುತಿದೆ!
ಮುಪ್ಪಿಗೆ ದೊಪ್ಪನೆ ಕೆಡೆವುದು,
ಬಾಳ್ವೆಯ ಸಸಿಯೆಂತೊ !

ಅಳಿವಿನೊಳೇ ಬೇರ್ಬಿಟ್ಟದೆ;
ಹುಟ್ಟಿನ ಬೀಜವನಿಟ್ಟದೆ;
ಅಳಿವಿಗೆ ಹುಟ್ಟನು ನೆಟ್ಟದೆ,
ಬಾಳ್ವೆಯ ಸಸಿಯೆಂತೊ !

ಹರಾವಶೀಗಾನ